ಉಪನ್ಯಾಸ
ಗ್ರಂಥಮಾಲೆ

೨೯೩

ಕಲಬುರಗಿ ಜಿಲ್ಲೆಯ
ಶಿಲಾಶಾಸನಗಳು

ಡಾ. ವಿ. ಶಿವಾನಂದ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಸಪ್ಟಂಬರ, ೧೯೭೮

ಉಪನ್ಯಾಸ ಗ್ರಂಥಮಾಲೆ

೨೯೩

ಚಂದ್ರಶೇಖರ

ಕಲಬುರಗಿ ಜಿಲ್ಲೆಯ ಶಿಲಾಶಾಸನಗಳು

ಡಾ|| ವಿ. ಶಿವಾನಂದ, ಎಂ.ಎ.,ಪಿಎಚ್.ಡಿ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ
ಸಪ್ಟೆಂಬರ, ೧೯೭೮

ಪ್ರಕಾಶಕರು :

ಸಿ. ಎಸ್. ಕಣವಿ
ನಿರ್ದೇಶಕರು, ವ್ಯಾಸಂಗವಿಸ್ತರಣ-ಪ್ರಕಟನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦ ೦೦೩

ಪ್ರಥಮ ಮುದ್ರಣ : ೫೦೦೦ ಪ್ರತಿಗಳು
ಸಪ್ಟಂಬರ, ೧೯೭೮

ಬೆಲೆ : ೨೫ ಪೈಸೆ

ಮುದ್ರಕರು:

ಜಿ. ಬಿ. ಮನ್ವಾಚಾರ
ಸಹಾಯಕ ನಿರ್ದೇಶಕರು,
ಕರ್ನಾಟಕ ವಿಶ್ವವಿದ್ಯಾಲಯ ಮುದ್ರಣಾಲಯ,
ಧಾರವಾಡ - ೫೮೦ ೦೦೩

ಮುನ್ನುಡಿ

ಕರ್ನಾಟಕ ವಿಶ್ವವಿದ್ಯಾಲಯವು ತನ್ನ ವ್ಯಾಸಂಗ ವಿಸ್ತರಣ ಹಾಗೂ ಪ್ರಕಟನ ಶಾಖೆಯ ಮುಖಾಂತರ ಕೈಕೊಂಡು ನಡೆಸುತ್ತಿರುವ ಜ್ಞಾನಪ್ರಸಾರದ ಯೋಜನೆಗಳಲ್ಲಿ ಈ 'ಉಪನ್ಯಾಸ ಗ್ರಂಥಮಾಲೆ' ಅತ್ಯಂತ ಮುಖ್ಯವೂ, ಜನಪ್ರಿಯವೂ ಆಗಿರುವುದು ಹೆಮ್ಮೆಯ ಮಾತಾಗಿದೆ. ವಿಶ್ವವಿದ್ಯಾಲಯದ ಆಡಳಿತ ಕ್ಷೇತ್ರದಲ್ಲಿರುವ ಎಂಟು ಜಿಲ್ಲೆಗಳಲ್ಲಿಯೂ ಉಪನ್ಯಾಸ ಶಿಬಿರಗಳನ್ನು ಏರ್ಪಡಿಸಲಾಗುತ್ತಿದ್ದು, ವಿಶ್ವವಿದ್ಯಾಲಯದ ಮತ್ತು ಇದಕ್ಕೆ ಸೇರಿದ ಕಾಲೇಜುಗಳ ಪ್ರಾಧ್ಯಾಪಕರು ಸಾಹಿತ್ಯ, ವಿಜ್ಞಾನ, ಸಾಮಾಜಿಕ ಶಾಸ್ತ್ರ ಮೊದಲಾದ ಶಾಖೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಆಯ್ದುಕೊಂಡು, ಶಾಸ್ತ್ರಸಮ್ಮತವಾದ ಸರಣಿಯಲ್ಲಿ, ಜನಸಾಮಾನ್ಯರಿಗೆ ತಿಳಿಯುವ ಶೈಲಿಯಲ್ಲಿ ಈ ಶಿಬಿರಗಳಲ್ಲಿ ಉಪನ್ಯಾಸಗಳನ್ನು ಕೊಡುತ್ತಾರೆ. ವಿಶ್ವವಿದ್ಯಾಲಯದ ಜ್ಞಾನಭಾಂಡಾರದ ಅಲ್ಪಾಂಶವನ್ನಾದರೂ ಮಹಾಜನರ ಮನೆಬಾಗಿಲಿಗೆ ಒಯ್ದು ಮುಟ್ಟಿಸಬೇಕೆಂದು ಮಾಡಿದ ಈ ಪ್ರಯತ್ನಕ್ಕೆ ನಮ್ಮ ನಿರೀಕ್ಷೆಗೆ ಮೀರಿದ ಮೆಚ್ಚಿಕೆಯೂ, ಪ್ರೋತ್ಸಾಹವೂ ದೊರೆಯುತ್ತಿವೆ. ಜನರು ತಾವಾಗಿಯೇ ಮುಂದೆ ಬಂದು ತಮ್ಮ ತಮ್ಮ ಊರುಗಳಲ್ಲಿ ಈ ಉಪನ್ಯಾಸ ಮಾಲೆಗಳನ್ನು ಏರ್ಪಡಿಸಲು ವಿಶ್ವವಿದ್ಯಾಲಯಕ್ಕೆ ಬರೆದು ಬಿನ್ನವಿಸಿಕೊಳ್ಳುತ್ತಿರುವುದು ನಿಜವಾಗಿಯೂ ಸಂತೋಷದ ಸಂಗತಿಯಾಗಿದೆ.

ಈ ಜ್ಞಾನ ಪ್ರಸಾರ ಕಾರ್ಯದಲ್ಲಿ ಭಾಗವಹಿಸುವದರಿಂದ ವಿಶ್ವವಿದ್ಯಾಲಯದ ಹಾಗು ಕಾಲೇಜುಗಳ ಅಧ್ಯಾಪಕರಿಗೆ ಆಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕ ಒದಗುವದಲ್ಲದೆ ಎಂತಹ ವಿಷಯವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹಾಗು ಅದನ್ನು ಸುಲಭ ಶೈಲಿಯಲ್ಲಿ ಬರೆವಣಿಗೆಯಲ್ಲಿಳಿಸುವ ಅವಕಾಶ ದೊರೆಯುತ್ತದೆ ಈ ಕಾರ್ಯದಲ್ಲಿ ಅವರೆಲ್ಲರೂ ಮನಮುಟ್ಟಿ ಸಹಕರಿಸುತ್ತಿರುವುದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೇ ೨೯೨ ಪುಸ್ತಕಗಳು ಪ್ರಕಟವಾಗಿವೆ. ಅವು ಅಚ್ಚಾಗಿ ಹೊರಬಂದೊಡನೆ ಅವುಗಳ ಸಾವಿರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಕಗಳು ನಾಲ್ಕು-ಐದು ಮುದ್ರಣಗಳನ್ನು ಕಂಡಿರುವುದು ಈ ಮಾಲೆಯ ಉಪಯುಕ್ತತೆಯನ್ನೂ, ಜನಪ್ರಿಯತೆಯನ್ನೂ ವ್ಯಕ್ತಗೊಳಿಸುತ್ತದೆ. ಇದು ನಾಡಿನ ಪ್ರಗತಿಯ ಚಿಹ್ನೆಯೆಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋಜನ ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖ ಪ್ರಗತಿಯಲ್ಲಿ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಎಸ್. ಎಸ್. ಒಡೆಯರ
ಕುಲಪತಿಗಳು

ಅರಿಕೆ

ಒಂದು ನಾಡಿನ ರಾಜಕೀಯ, ಧಾರ್ಮಿಕ, ಸಾಂಸ್ಕೃತಿಕ ಅಧ್ಯಯನಕ್ಕೆ ಶಿಲಾಶಾಸನಗಳು ಮಹತ್ವದ ಆಕರಗಳಾಗುತ್ತವೆ. ಕಲಬುರಗಿ ಜಿಲ್ಲೆಯ ಪ್ರಾಚೀನ ಇತಿಹಾಸದ ಮೇಲೆ ಬೆಳಕು ಚೆಲ್ಲುವ ಶಾಸನಗಳನ್ನು ಸಂಶೋಧಿಸುವ, ಪ್ರಕಟಿಸುವ ಸಮಗ್ರಕಾರ್ಯ ಈಗ ನಡೆದುದಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಇನ್ನು ಮುಂದೆ ನಡೆಯಬೇಕಾಗಿದೆ. ಈ ಹಿಂದೆ ಕರ್ನಲ್ ಮೆಕೆಂಝಿ, ಡಾ|| ಪಿ. ಬಿ. ದೇಸಾಯಿ, ಡಾ|| ಶಿ.ಚ. ನಂದೀಮಠ, ಡಾ|| ಫ.ಗು. ಹಳಕಟ್ಟಿ ಮೊದಲಾದ ಮಹನೀಯರು ಈ ಕ್ಷೇತ್ರಕ್ಕೆ ತಮ್ಮ ಸೇವೆ ಸಲ್ಲಿಸಿದ್ದರೂ, ಯಾರಿಂದಲೂ ಈ ಭಾಗದ ಶಾಸನಗಳನ್ನು ಪರಿಚಯಿಸುವ ಪ್ರತ್ಯೇಕವಾದ ಒಂದು ಪುಸ್ತಕ ಹೊರಬಂದಿರಲಿಲ್ಲ. ಅವರ ಕಾರ್ಯಕ್ಷೇತ್ರ ಹೆಚ್ಚು ವಿಶಾಲವಾಗಿದ್ದರಿಂದ ಈ ಭಾಗದಲ್ಲಿ ಸಿಕ್ಕ ಹಲವಾರು ಶಾಸನಗಳನ್ನು ಸಾಂದರ್ಭಿಕವಾಗಿ ಉಲ್ಲೇಖಿಸಿದರೇ ಹೊರತು 'ಕಲಬುರಗಿ ಜಿಲ್ಲೆಯ ಶಾಸನ'ಗಳನ್ನೇ ಕುರಿತು ಬರೆಯಲು ಅವಕಾಶ ಪಡೆಯಲಿಲ್ಲ. ಈ ಕೊರತೆಯನ್ನು ಪೂರಯಿಸುವ ಒಂದು ಪುಟ್ಟ ಪುಸ್ತಕ ಇದೆಂದು ನನ್ನ ನಮ್ರ ತಿಳುವಳಿಕೆ.

ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಸಂಗ ವಿಸ್ತರಣ ಮತ್ತು ಪ್ರಕಟನ ವಿಭಾಗದಿಂದ ಏರ್ಪಟ್ಟ ಉಪನ್ಯಾಸ ಮಾಲಿಕೆಯಲ್ಲಿ ನಾನು ೧೯೭೭ ರ ಎಪ್ರಿಲ್ ತಿಂಗಳಿನಲ್ಲಿ ಇದೇ ಜಿಲ್ಹೆಯ 'ಯಡ್ರಾಮಿ' ಗ್ರಾಮದಲ್ಲಿ ಈ ಬಗೆಗೆ ಉಪನ್ಯಾಸ ವಿತ್ತುದು ಇದೀಗ ಪುಸ್ತಕ ರೂಪ ತಾಳಿದೆ. ಇದನ್ನು ಪ್ರಕಾಶಪಡಿಸುವಲ್ಲಿ ನೆರವಾದ ಪ್ರಕಟನ ಶಾಖೆಯ ನಿರ್ದೇಶಕ ರಾದ ಮಾನ್ಯ ಶ್ರೀ ಚೆನ್ನವೀರ ಕಣವಿ ಅವರಿಗೂ, ಉಪ ನಿರ್ದೇಶಕರಾದ ಶ್ರೀ ಎಸ್. ಬಿ. ನಾಯಕ ಅವರಿಗೂ ತುಂಬ ಕೃತಜ್ಞನಾಗಿದ್ದೇನೆ. ಸೂಕ್ತಸಲಹೆಗಳನ್ನಿತ್ತ ಕನ್ನಡ ಅಧ್ಯಯನ ಪೀಠದ ರೀಡರ್ ಡಾ! ಎಂ. ಎಂ. ಕಲಬುರಗಿ ಅವರನ್ನು ಸ್ಮರಿಸುತ್ತೇನೆ. ಈ ಕೃತಿಯ ಕರಡು ಪ್ರತಿ ಸಿದ್ಧಗೊಳಿಸಿಕೊಟ್ಟ ಸುರಪುರದ ವಿದ್ಯಾರ್ಥಿ ಶ್ರೀ ಕುಂಟೋಜಿ ಅವರಿಗೆ ಚಿರಋಣಿ.

ಕನ್ನಡ ವಿಭಾಗ
ಮದ್ರಾಸ ವಿಶ್ವವಿದ್ಯಾಲಯ — ವಿ. ಶಿವಾನಂದ
ಮದ್ರಾಸ
ದಿ. ೧೧-೯-೧೯೭೮

ಪರಿವಿಡಿ

೧. ಸಂಕ್ಷಿಪ್ತ ಪರಿಚಯ

ಕರ್ನಾಟಕ ಸಂಸ್ಕೃತಿಯ ಹಿರಿಮೆಯನ್ನು ಹೊತ್ತು ನಿಂತ ಹತ್ತೊಂಬತ್ತು ಜಿಲ್ಹೆಗಳಲ್ಲಿ ಕಲಬುರಗಿಯೂ ಒಂದು. ಪ್ರದೇಶ ವಿಸ್ತಾರದ ದೃಷ್ಟಿಯಿಂದ ಇಡೀ ರಾಜ್ಯದಲ್ಲಿ ಇದಕ್ಕೆ ಎರಡನೆಯ ಮತ್ತು ಜನಸಂಖ್ಯೆಯ ದೃಷ್ಟಿಯಿಂದ ೭ ನೆಯ ಸ್ಥಾನಗಳು ಲಭ್ಯವಾಗಿವೆ. ಇದರ ಭೂ–ವಿಸ್ತಾರ ೬,೨೭೧ ಚದರು ಮೈಲುಗಳು. ೧೯೭೧ ರ ಜನಗಣತಿಯ ಮೇರೆಗೆ ಈ ಜಿಲ್ಹೆಯ ಜನಸಂಖ್ಯೆ ೧೭,೪೯,೨೨೦ ಆಗಿದೆ.

ಇದರ ದಕ್ಷಿಣಕ್ಕೆ ಕೃಷ್ಣಾನದಿ, ಪಶ್ಚಿಮದ ಮೇರೆಗುಂಟ ಭೀಮಾನದಿಗಳು ಹರಿಯುತ್ತವೆ. ಉತ್ತರಕ್ಕೆ ಬೀದರ ಜಿಲ್ಹೆ ಮತ್ತು ಮಹಾರಾಷ್ಟ್ರದ ಉಸ್ಮಾನಾಬಾದ ಜಿಲ್ಹೆಗಳು, ದಕ್ಷಿಣಕ್ಕೆ ರಾಯಚೂರ ಜಿಲ್ಹೆ, ಪೂರ್ವಕ್ಕೆ ಆಂಧ್ರದ ಮೇಡಕ ಮತ್ತು ಮೆಹಬೂಬನಗರ ಜಿಲ್ಹೆಗಳು, ಪಶ್ಚಿಮಕ್ಕೆ ವಿಜಾಪೂರ ಮತ್ತು ಮಹಾರಾಷ್ಟ್ರದ ಸೊಲ್ಲಾಪುರ ಜಿಲ್ಹೆಗಳು ಇದಕ್ಕೆ ಮೇರೆಗಳಾಗಿವೆ.

೨. ಕಲಬುರಗಿ ಹೆಸರಿನ ಪ್ರಾಚೀನತೆ

ಕಲಬುರಗಿ ಮತ್ತು ಗುಲ್ಬರ್ಗ ಎಂಬ ಎರಡು ಪರ್ಯಾಯ ನಾಮಗಳು ಈ ಜಿಲ್ಹೆಗಿವೆ. ಶಾಸನೋಕ್ತ ಪ್ರಮಾಣಗಳಿಂದ 'ಕಲಬುರಗಿ' ಎಂಬ ಹೆಸರೇ ಪ್ರಾಚೀನ ವಾದುದು. ಕ್ರಿ. ಶ. ೧೧೯೮ ರ ಹುಣಸೀ ಹಡಗಲಿ ಶಾಸನ ದಲ್ಲಿ ಇದರ ಹೆಸರು 'ಕಲುಂಬರಗೆ' ಎಂದು ನಿರ್ದೇಶಿತ ವಾಗಿದೆ.* ಇದೇ ಹೆಸರು ತರುವಾಯದ ಬೀದರ ಜಿಲ್ಹೆಯ ಒಂದು ಶಾಸನದಲ್ಲೂ ಕಾಣಿಸಿಕೊಂಡಿದೆ. ಕಲ್ಲುಂ+ಪಱಿಗೆ ಎಂಬುದು ಇದರ ವಿಗ್ರಹರೂಪ. ಕಲ್ಲುಗಳ 'ಪಱಿಗೆ' ಎಂದರೆ ಕಲ್ಪಡೆಯ ನಾಡು (Stoney Land), ಕಲ್ಮನೆಗಳಿಂದ ಆಚ್ಛಾದಿತವಾದುದು (stone roofing), ಇಲ್ಲವೆ ಕಲ್ಲುಗಳ ರಾಶಿ (A heap of stones) ಯುಳ್ಳ ನೆಲ ಎಂಬಿವು 'ಕಲಬುರಗಿ' ಪದಕ್ಕೆ ಕನ್ನಡದಲ್ಲಿ ನಿಷ್ಪನ್ನವಾಗುವ ಅರ್ಥ ಗಳಾಗುತ್ತವೆ. 'ಗುಲಬರ್ಗ' ಎಂಬುದು ಹೆಚ್ಚು ಕಡಿಮೆ ಕಲಬುರಗಿ ಎಂಬ ಹೆಸರಿನ ಫಾರಸೀಕರಣ; ಫಾರಸೀ ಶಬ್ದ ಕೋಶದಲ್ಲಿ 'ಗುಲ್' ಎಂದರೆ ಹೂವು 'ಬರ್ಗ' ಎಂದರೆ ಎಲೆ. ಇದೊಂದು ಸುಂದರ ಹೆಸರಾಗಿದ್ದರೂ ಕಲ್ಲಿನ ನಾಡಿಗೆ ಇದು

---

* "ವಾಯುವ್ಯದ ಪೊಲದಲ್ಕಲುಂಬರಗೆಯಲ್ನುಡಿದಂತೆ ಗಣ್ಡನಗಡಿಂಬ ಕಲು ಬಿಟ್ಟ ಕರಿಯ ನೆಲ ಮತ್ತರು ಹನ್ನೆರಡು ಕಾಲಡಿ" ಹುಣಸೀ ಹಡಗಲಿ ಪಾರ್ಶ್ವನಾಥಬಸದಿಯ ಶಾಸನ. ಸಾಲು ೫೧.

ವಿಪರ್ಯಾಸವೇ! ಕಲಬುರಗಿ ಎಂಬ ಅಚ್ಚಗನ್ನಡ ರೂಪವೇ ಮುಹಮ್ಮದೀಯರಿಗೆ ಮೊದಮೊದಲು 'ಕಲಬುರ್ಗ್' ಎನ್ನಿಸಿದ್ದು ಮುಂದೆ ಅದೇ 'ಗುಲಬರ್ಗ' ಎಂದಾಯಿತು. 'It is also said that Kalburgi known later as Kalburgh came to be pronounced as Gulbarga when it was under the muslim rule' ಎಂದು ಈ ಜಿಲ್ಲೆಯ ಗೆಝೆಟಿಯರದಲ್ಲಿ ಹೇಳಿದ್ದು ಉಚ್ಚಾರಣೆಯ ದೃಷ್ಟಿಯಿಂದ ವಾಸ್ತವಿಕವಾಗಿದೆ. (Glb. Dist. Gazz. P. I.) ವಿಜಯನಗರಕ್ಕೆ ಬಂದಿದ್ದ ಫರ್ಶಿಯಾದ ರಾಯಭಾರಿ ಅಬ್ದುಲ್ ರಝಾಕನು ವಿಜಯನಗರ ಸಾಮ್ರಾಜ್ಯದ ಮೇರೆಗಳನ್ನು ಹೇಳುವಾಗ 'ಕಲಬರ್ಗ' ಎಂದೇ ಉಲ್ಲೇಖಿಸಿದ್ದಾನೆ. ಇಲ್ಲಿ ಪೂರ್ವಪದ 'ಕಲ್' ಫಾರಸೀಕರಣಕ್ಕೊಳಗಾಗದೇ ಉಳಿದಿದೆ. ವಿಜಯನಗರದ ಕೃಷ್ಣದೇವರಾಯನ ಬಿರುದುಗಳನ್ನು ವರ್ಣಿಸುತ್ತ ಅವನ ಆಸ್ಥಾನದ ತೆಲುಗು ಕವಿ ಅಲ್ಲಸಾನಿ ಪೆದ್ದನನು ತನ್ನ 'ಮನುಚರಿತೆ'ಯಲ್ಲಿ 'ಕಲಬುರಗಿ' ಕಟಕ ಕ್ಷಿತಿಪಾಲಕ ಎಂದಿದ್ದಾನೆ. (೭-೧೪೨) ಕ್ರಿ. ಶ. ೧೪೫೯ ರ ಶಿರವಾಳದ ಒಂದು ಶಿಲಾಶಾಸನದಲ್ಲಿ 'ಶ್ರೀಮತು ಕಲಬುರಿಗಿಯ ನಾಡೊಳಗೆ' ಎಂಬ ನಿರ್ದೇಶನವಿದೆ. ಕ್ರಿ. ಶ. ೧೫೮೦ ರಲ್ಲಿದ್ದ ವಿರುಪಾಕ್ಷಪಂಡಿತ ಕವಿ ಚನ್ನಬಸವ ಪುರಾಣದ ಕಾಲಜ್ಞಾನ ಸಂಧಿಯಲ್ಲಿ (ಸಂ. ೬೮) 'ಕಲುಬುರಿಗೆ' ಎಂದೇ ಕರೆದಿದ್ದಾನೆ. ಒಟ್ಟಿನಲ್ಲಿ ಕಲಬುರಗಿ ಎಂಬ ಹೆಸರು ಕ್ರಿ. ಶ. ೧೬ನೆಯ ಶತಮಾನದ ವರೆಗೂ ರೂಢಿಯಲ್ಲಿದ್ದು ಮುಹಮ್ಮದೀ

ಯರ ಆಳಿಕೆಯ ಪ್ರಭಾವದಿಂದ 'ಗುಲಬರ್ಗ' ಎಂದಾಗಿದೆ. ಆದರೆ ಕರ್ನಾಟಕ ರಾಜ್ಯೋದಯದ ಕಾಲದಲ್ಲಿ ಆಡಳಿತ ಭಾಷಾ ಇಲಾಖೆಯ ನಿಯಮಾನುಸಾರ ಪ್ರತಿಯೊಂದು ಜಿಲ್ಹೆಯ ಹೆಸರುಗಳು ಅಚ್ಚಗನ್ನಡ ಪರಂಪರೆಯನ್ನು ಕಾಯ್ದುಕೊಂಡಿರಬೇಕು. ಆದರೂ ಕಲಬುರ್ಗಿ, ಗುಲ್ಬರ್ಗ ಎರಡೂ ಮುಂದುವರಿದಿವೆ.

೩. ಪ್ರಮುಖ ರಾಜಮನೆತನಗಳು

ಕಲಬುರಗಿ ಜಿಲ್ಹೆ ಕರ್ನಾಟಕದ ಕೆಲವು ಪ್ರಸಿದ್ಧ ರಾಜಮನೆತನಗಳ ಆಡಳಿತ ಸಂಪರ್ಕದಿಂದಾಗಿ ರಾಜಕೀಯ ಇತಿಹಾಸದಲ್ಲಿ ಗಣನೀಯವಾಗಿದೆ. ಇಲ್ಲಿ ಅವುಗಳ ಸಂಕ್ಷಿಪ್ತ ಸಮೀಕ್ಷೆ ಮಾಡಲಾಗಿದೆ.

ಶಾತವಾಹನರು

ಶಾತವಾಹನರ ಕಾಲದ ಬೌದ್ಧ ಧರ್ಮದ ಮೇಲೆ ಬೆಳಕು ಚೆಲ್ಲುವ ಪ್ರಾಚೀನ ಅವಶೇಷಗಳು, ಈ ಜಿಲ್ಲೆಯ ಸನ್ನತಿ, ಶಿರವಾಳ ಹಾಗೂ ಜೇವರಗಿ ಮುಂತಾದ ಕಡೆಗಳಲ್ಲಿ ದೊರಕಿವೆ. ದಕ್ಷಿಣ ಭಾರತದ ಪ್ರಾಚೀನ ಪ್ರಸಿದ್ಧ ಬೌದ್ಧರ ಯಾತ್ರಾಸ್ಥಳವಾಗಿದ್ದ ಸನ್ನತಿ (ಸಂತಿ)ಯಲ್ಲಿ ಶ್ವೇತ ಘನ ಶಿಲೆಯ ಮೇಲೆ ಬುದ್ಧರ ಸ್ತೂಪ ಹಾಗೂ ಚೈತ್ಯಗೃಹಗಳಿಗೆ

ಪತ್ತಿ ಬಿಟ್ಟವರ ಹೆಸರುಗಳು ಲಿಖಿತವಾಗಿವೆ. ಈ ಕಾಣಿಕೆಯನ್ನಿತ್ತವರು ಅಂದಿನ ಆಡಳಿತ ಕ್ಷೇತ್ರದ ಉನ್ನತ ಅಧಿಕಾರಿಗಳು. ಇವರಲ್ಲಿ 'ಗೃಹಪತಿ', 'ಅಮಾತ್ಯ ಪತ್ನಿ', 'ಮಹಾಜನ' ಈ ಮುಂತಾದವರ ಉಲ್ಲೇಖವಿದೆ. ಈ ಆಧಾರಗಳಿಂದ ಕ್ರಿ. ಶ. ೧ ರಿಂದ ೩ ನೆಯ ಶತಕದ ಕಾಲಾವಧಿಯ ಕಲಬುರಗಿ ಜಿಲ್ಹೆ ಶಾತವಾಹನರ ಆಳಿಕೆಗೊಳಗಾಗಿದ್ದು, ಬೌದ್ಧ ಧರ್ಮದ ನೆಲೆವೀಡಾಗಿತ್ತೆಂಬುದು ಸ್ಪಷ್ಟವಾಗುತ್ತದೆ.

ರಾಷ್ಟ್ರಕೂಟರು

ಈ ಮನೆತನದ ಖ್ಯಾತಿ ವಿಖ್ಯಾತಿಗಳ ಜನ್ಮಭೂಮಿ ಕಲಬುರಗಿ ಜಿಲ್ಹೆ. ಇವರ ರಾಜಧಾನಿಯಾದ ಮಳಖೇಡ ಅರ್ಥಾತ್ 'ಮಾನ್ಯಖೇಟ'ವು ಈಗ ಈ ಜಿಲ್ಹೆಯ ಶೇಡಂ ತಾಲೂಕಿನಲ್ಲಿದೆ. ದಂತಿದುರ್ಗನಿಂದ ಸ್ಥಾಪಿತವಾದ ಮಳಖೇಡದ ರಾಜ ಮನೆತನವನ್ನು 'ಅಮೋಘ ವರ್ಷ' ಬಿರುದಾಂಕಿತನಾದ ನೃಪತುಂಗ ದೊರೆ (ಕ್ರಿ. ಶ. ೮೧೪-೮೭೮) ಕೀರ್ತಿ ವೈಭವದ ಪರಾಕಾಷ್ಠದೆಸೆಗೆ ಕೊಂಡೊಯ್ದನು. 'ಕವಿರಾಜ ಮಾರ್ಗ' ವೆಂಬ ಕನ್ನಡದ ಮೊದಲಗ್ರಂಥ ಹುಟ್ಟಿದ್ದು ಇವನ ಕಾಲದಲ್ಲೇ. ರಾಷ್ಟ್ರಕೂಟರು ಈ ಪ್ರದೇಶವನ್ನಾಳಿದರೆಂಬ ಬಗೆಗೆ ವದಂತಿ ದಟ್ಟವಾಗಿದ್ದರೂ ಶಾಸನೋಕ್ತ ಪ್ರಮಾಣಗಳ ಬೆಂಬಲ ಸಾಕಷ್ಟಿರಲಿಲ್ಲ. ಇತ್ತೀಚೆಗೆ ಈ ಜಿಲ್ಹೆಯ ಶಿರವಾಳದಲ್ಲಿ ರಾಷ್ಟ್ರಕೂಟ 'ಅಕಾಲವರ್ಷ' ಬಿರುದಾಂಕಿತ ಮೂರನೆಯ

ಕೃಷ್ಣನ ಉಲ್ಲೇಖವಿರುವ ಒಂದು ಶಾಸನ ಸಿಕ್ಕಿದ್ದರಿಂದ ಈ ಪರಿಸರದ ಚರಿತ್ರೆಗೆ ಹೆಚ್ಚಿನ ಮಹತ್ವ ಪ್ರಾಪ್ತವಾಗಿದೆ.

ಕಲ್ಯಾಣದ ಚಾಳುಕ್ಯರು

ಚಾಳುಕ್ಯರ ಕಾಲದ ಶಾಸನಗಳು ಈ ಜಿಲ್ಲೆಯಲ್ಲಿ ಅಧಿಕ ಸಂಖ್ಯೆಯಲ್ಲಿ ದೊರೆಯುತ್ತವೆ. ಹಂದರಕಿಯ ಶಾಸನದಲ್ಲಿ ಚಾಳುಕ್ಯವಂಶದ ಮೂಲವನ್ನು ಪೌರಾಣಿಕ ಮೂಲದಿಂದ (Mythological) ಆರಂಭಿಸಿದೆ. ಇವರು 'ಏಕ ವಾಕ್ಯರು' ಎಂದು ಮುಂತಾಗಿ ಹಂದರಕಿ ಶಾಸನ ವರ್ಣಿಸಿದೆ. ಈ ವಂಶದಲ್ಲಿ ವಿಷ್ಣುವರ್ಧನವಿಜಯಾದಿತ್ಯ ಹಾಗೂ ಸತ್ಯಾಶ್ರಯರು ಅಯೋಧ್ಯಾಪತಿಗಳೆಂದೂ ಹೆಸರಾಂತರು. 'ಸತ್ಯಾಶ್ರಯ'ನ ತರುವಾಯ ಏಕೋನಷಷ್ಠಿ ಪ್ರಮುಖರು ಎಂದರೆ ೫೯ ಜನ ಅರಸರಾಳಿದರು. ಈ ಶಾಖೆಯ ಅಂತ್ಯ ಕಾಲದಲ್ಲಿ ತೈಲನು ರಾಷ್ಟ್ರಕೂಟರನ್ನು ಗೆದ್ದು ಪೂರ್ವಜರು ಬದಾಮಿಯಲ್ಲಿ ಕಳೆದುಕೊಂಡಿದ್ದ ಚಾಳುಕ್ಯ ರಾಜ್ಯವನ್ನು ಕಲ್ಯಾಣದಲ್ಲಿ ಸ್ಥಾಪಿಸಿದನು. ಈ ಮನೆತನದ ಪ್ರಖ್ಯಾತ ದೊರೆಯೆಂದರೆ ಆರನೆಯ ವಿಕ್ರಮಾದಿತ್ಯ. ೩ನೆಯ ಸೋಮೇಶ್ವರನ ಕಾಲದ ವರೆಗೆ ಆಳಿದ ಎಲ್ಲ ಅರಸರ ನಾಮ ನಿರ್ದೇಶನ ಹಂದರಕಿ ಶಾಸನದಲ್ಲಿ ಬಂದುದರಿಂದ ಚಾಳುಕ್ಯರ ಸಮಗ್ರ ಇತಿಹಾಸಕ್ಕೆ ಇಂಥ ಶಾಸನಗಳು ಅಡಿಗಲ್ಲಾಗುತ್ತವೆ. 'ರಟ್ಟರಂ ಸಂಗರದೊಳ್ ಸೀಳ್ದೊಟ್ಟಿ' ೭ನೆಯ ತೈಲನು

ಸಿಂಹಾಸನಕ್ಕೊಡೆಯನಾದನೆಂದು ತೆಂಗಳಿ ಶಾಸನ (ಕ್ರಿ.ಶ. ೧೦೬೨) ಹೇಳುತ್ತದೆ. ಇದೇ ವಿಷಯವನ್ನು ಶೇಡಂ ಶಾಸನವೊಂದು (೧೧೩೮) ಮನೋಜ್ಞವಾಗಿಸಿದೆ.

ಅಗೆನೆಗೆವಂದದಿಂದೊಗೆದ ರಾಷ್ಟ್ರಕುಮಾರಕರಂ
ಪೊರಟ್ಟಿಕೊಂ
ವಗಣಿತವಾದ ಪೆರ್ಮೆಗೆ ತವರ್ಮನೆಯಾಗಿ
ಚಮಿಕ್ಯರನ್ವಯಂ
ನೆಗಳೆ ನೆಗಳ್ತೆಯಂ ತಳೆದು ತಂನಯ
ತೇಜ[ಸ]ದಾಣೆಯೋಲೆಯುಂ
ಡಿಗೆ ಸಲೆ ಸಾಧ್ಯವಾದ ನೆಲನಂ ತಳೆದಂ
ನೃಪಮೇರು ತೈಲಪಂ.

ಇಲ್ಲಿ ಮುಖ್ಯವಾದ ಕೆಲವು ಚಾಳುಕ್ಯರ ಕಾಲದ ಶಾಸನಗಳ ಸ್ಥಳ, ಅರಸರ ಹೆಸರುಗಳನ್ನು ಕಾಲಕ್ರಮದಲ್ಲಿ ಕೊಟ್ಟಿದೆ.

ಆಳಿಕೆ	ಕಾಲ	ಸ್ಥಳ	ವಿಷಯ
೧	೨	೩	೪
೧ ನೆಯ ಸೋಮೇಶ್ವರ	ಕ್ರಿ. ಶ. ೧೦೫೪	ದಿಗ್ಗಾಂವ	ಸ್ವಯಂಭೂ ದೇವರಿಗೆ ದತ್ತಿ.
,,	,,	ಕೆಂಭಾವಿ	ಸಗರ-೩೦೦ ನಾಡಿನ ಉಲ್ಲೇಖ.
,,	ಕ್ರಿ. ಶ. ೧೦೫೮	ನಾಗಾಯಿ	ತ್ರೈಪುರುಷ ದೇವಾಲಯ ಮತ್ತು ಘಟಿಕಾಸ್ಥಾನಕ್ಕೆ ದತ್ತಿ.
,,	—	ಬಂಕೂರ	—
೬ ನೆಯ ವಿಕ್ರಮಾದಿತ್ಯ	ಕ್ರಿ. ಶ. ೧೦೭೭	ಏಪೂರು	ಸಗರ ೩೦೦ ನಾಡಿನ ಉಲ್ಲೇಖ.

೧	೨	೩	೪
೬ನೆ ಯ ವಿಕ್ರಮಾದಿತ್ಯ	ಕ್ರಿ. ಶ. ೧೦೮೨	ಅಲಂದೆ	ಮಲ್ಲಿಕಾರ್ಜುನ ದೇವರಿಗೆ ದತ್ತಿ.
,,	ಕ್ರಿ. ಶ. ೧೦೯೨	ನಾಗಾಯಿ	ರಾಮೇಶ್ವರ-ಲಕ್ಷ್ಮಣೇಶ್ವರ ದೇವರಿಗೆ ದತ್ತಿ.
,,	ಕ್ರಿ. ಶ. ೧೧೦೭	ದಿಗ್ಗಾಂವಿ	ಚಿಕ್ಕಸಂಜೆಯ ಮಠದ ಜನಾರ್ಧನ ದೇವರಿಗೆ ಭೂದಾನ.
,,	ಕ್ರಿ. ಶ. ೧೧೧೮	ಹಂದರಕಿ	ಲೋಕೇಶ್ವರ ದೇವರಿಗೆ ದತ್ತಿ.
,,	ಕ್ರಿ. ಶ. ೧೧೨೪	ಮಾರ್ತೂರ	ಬೀಚೇಶ್ವರ ದೇವರಿಗೆ ದತ್ತಿ.

೧	೨	೩	೪
೬ ನೆಯ ವಿಕ್ರಮಾದಿತ್ಯ	ಕ್ರಿ. ಶ. ೧೧೨೪	ಶೇಡಂ	ಬ್ರಹ್ಮಜಿನಾಲಯಕ್ಕೆ ದತ್ತಿ.
,,	ಕ್ರಿ. ಶ. ೧೧೨೬	ಮಣೂರ	ಗಂಗರಾಸೀಜೀಯರ ಆತ್ಮ ಬಲಿ ದಾನಕ್ಕೆ ನೀಡಿದ ಮಾನ್ಯ.
೩ ನೆಯ ಸೋಮೇಶ್ವರ	ಕ್ರಿ. ಶ. ೧೧೩೪	ನಿಂಬರಗಿ	ಸಿವರಾಜನ ಹಳ್ಳಿಯನ್ನು ಅಭಿನವ ಕಲಿದೇವೇಶ್ವರ ದೇವಾಲಯಕ್ಕೆ ಉಂಬಳಿ ಕೊಟ್ಟದು.
,,	ಕ್ರಿ. ಶ. ೧೦೫೭		ರಾಣಿ ಬರ್ಮಲದೇವಿ ದತ್ತಿಕೊಟ್ಟ ವಿವರ.
,,	ಕ್ರಿ. ಶ. ೧೧೩೮	ಶೇಡಂ	ಶಾಂತಿಜಿನೇಶ್ವರ ಬಸದಿಯ ನಿರ್ಮಾಣ ವಿಷಯ.

೧	೨	೩	೪
೨ ನೆಯ ಜಗದೇಕಮಲ್ಲ	ಕ್ರಿ. ಶ. ೧೧೪೨	ಹಿರಿಮುದನೂರು	ಕಪ್ಪದೇವರಸನು ಆಳುತ್ತಿದ್ದ ವಿವರ.
,,	ಕ್ರಿ. ಶ. ೧೧೪೮	ಗೊಬ್ಬೂರು	ಜಾಡರ ದಾಸಿಮಯ್ಯನ ಪ್ರಿಯ ಪುತ್ರರಪ್ಪ ಜಾಡಗೋತ್ರಳಿಗಳ ಉಲ್ಲೇಖ.
ನೂರ್ಮಡಿತೈಲ	ಕ್ರಿ. ಶ. ೧೧೬೨	ತೆಂಗಳಿ	ಬಾಣವಂಶದ ಬಿಬ್ಬರಸ ಹಾಗೂ ನಾಚಿ ದಂಡನಾಯಕರ ಉಲ್ಲೇಖ ಭೋಗೇಶ್ವರ ಮತ್ತು ನಾಚೇಶ್ವರ ದೇವಸ್ಥಾನಕ್ಕೆ ಬಿಟ್ಟ ತಳವೃತ್ತಿ.

ಕಳಚುರಿ ಅರಸರು

ಕಳಚುರಿ ಮನೆತನದ ಮೂಲ ಪುರುಷನ ನಾಮೋಲ್ಲೇಖವನ್ನು ಮಾಡುವ ಪ್ರಪ್ರಥಮ ಶಾಸನ ನಮಗೆ ಈ ಜಿಲ್ಲೆಯ ಹರಸೂರಿನಲ್ಲಿ ದೊರೆಯುತ್ತವೆ. (ಕ್ರಿ. ಶ. ೧೧೭೨) ಕಳಚುರಿ ವಂಶದ ಮೂಲಪುರುಷ ಉಚಿತ, ಅವನ ಮಗ ಅಸಗ, ಅವನ ಮಗ ಕನ್ನಮ, ಇವನ ಇಬ್ಬರು ಮೊಮ್ಮಕ್ಕಳು ರಾಜ ಮತ್ತು ಬಿಜ್ಜರು. ಮುಂದೆ ಕರ್ಣ, ಜೋಗಮ ಪೆರ್ಮಾಡಿಗಳು ಆಳಿದರು. ಈ ಪೆರ್ಮಾಡಿಯ ಮಗನೇ ಕರ್ನಾಟಕ ಇತಿಹಾಸದಲ್ಲಿ ಅದರಲ್ಲೂ ವೀರಶೈವ ಧರ್ಮ ಕ್ರಾಂತಿಯ ಸ್ಮಾರಕ ಪುಟಗಳಲ್ಲಿ ಹೆಸರುವಾಸಿಯಾದ ಬಿಜ್ಜಳ ಚಕ್ರವರ್ತಿ. ಹರಸೂರಿನ ಶಾಸನ ಇಷ್ಟೊಂದು ಪ್ರಾಚೀನ ವಂಶವಿಸ್ತಾರವನ್ನು ಕೊಡುತ್ತ ಬಿಜ್ಜಳನ ಮಗ ರಾಯ ಮುರಾರಿ ಸೋವಿದೇವನ ಆಳಿಕೆಯನ್ನು ಪ್ರಸ್ತಾಪಿಸುತ್ತದೆ. ಸೋವಿದೇವನ ಉಪರಾಜದಾನಿ ಅಥವ 'ನೆಲೆವೀಡು' ಮೊದೆಗನೂರು ಆಗಿತ್ತೆಂದು ಇಲ್ಲಿ ಹೇಳಿದೆ. ಇವನ ಕೈಕೆಳಗಿನ ಅಧಿಕಾರಿಗಳಾದ ಮಾಧವಮಂತ್ರಿ, ವೀರರಾಮದೇವ ಮತ್ತು ವೀರಗೊಂಕರಸರು ಅಂಕುಲಗೆ ಎಂಬ ಹಳ್ಳಿಯನ್ನು ಶಾಲೆಯ ಸೀಮೆಳ (ಹರಸೂರು)ದ ಭೋಗೇಶ್ವರ ದೇವರಿಗೆ ದತ್ತಿ ಬಿಟ್ಟ ವಿಷಯ ಇಲ್ಲಿದೆ. ರಾಯಮುರಾರಿ ಸೋವಿದೇವನ ಕಾಲದಲ್ಲಿ ಹರಸೂರು ಪ್ರಸಿದ್ಧ ವಿದ್ಯಾಕೇಂದ್ರವೂ ಅಗ್ರಹಾರವೂ ಎನ್ನಿಸಿತ್ತು. ರಾಯ ಮುರಾರಿಯ ದೈವಭಕ್ತಿಯನ್ನು ಮೆರೆಯುವ ಮತ್ತೊಂದು

ಶಾಸನ ನಮಗೆ ಚಿಕ್ಕಮುದನೂರಿನಲ್ಲಿ ದೊರೆಯುತ್ತದೆ. ಅಲ್ಲಿನ ಪ್ರಸಿದ್ಧ ತೀರ್ಥಗಳಾದ ರಾಮೇಶ್ವರ ಮತ್ತು ಲಕ್ಷ್ಮಣೇಶ್ವರ ದೇವರಿಗೆ 'ಶ್ರೀರಾಮದತ್ತಿ' ಯಾಗಿ ಭೂದಾನ ಮಾಡಿದ ಶಾಸನ ಗೋಪಾಲಸ್ವಾಮಿ ಗುಡಿಯಲ್ಲಿ ಉಪಲಬ್ಧವಿದೆ. ಇವನ ಕೈಕೆಳಗೆ ಮಹಾಪ್ರಚಂಡ ದಂಡನಾಯಕ ಬಮ್ಮಿದೇವನು ಈ ಪ್ರದೇಶಕ್ಕೆ ಅಧಿಕಾರಿಯಾಗಿದ್ದ ಸಂಗತಿ ಇದರಲ್ಲಿದೆ.

ಯಾದವರು

ಕಳಚುರಿಯರ ತರುವಾಯ ಈ ಪ್ರದೇಶ ಕೆಲವೊಂದು ಕಾಲ ಯಾದವ ಚಕ್ರವರ್ತಿಗಳಿಗೂ ಆಧೀನವಾಗಿದ್ದ ಬಗ್ಗೆ ಶಾಸನಗಳು ಬೆಳಕು ಬೀರುತ್ತವೆ. ಚಿಕ್ಕ ಮುದನೂರಿನ ಶಾಸನದಲ್ಲಿ ಯಾದವನಾರಾಯಣ ಪ್ರತಾಪ ಚಕ್ರವರ್ತಿ ಸಿಂಘಣ ದೇವನಾಳಿಕೆಯ ಮೊದಲ ವರುಷ (ಕ್ರಿ.ಶ. ೧೨೧೦)ದಲ್ಲಿ ಸಗರ ರೆಯಿನೂರುಂಬಳಿಯ ಬಾಡದ ಆಯುರಸ ವಡೆಯ’ ನೆಂಬ ಶೆಟ್ಟಿ ದಾನವಿತ್ತ ವಿಷಯವಿದೆ. ಅದಕ್ಕೂ ಪೂರ್ವದ ಭಿಲ್ಲಮ ಚಕ್ರವರ್ತಿಯು ತನ್ನ ಆಳಿಕೆಯ ೧೨ನೆಯ ವರುಷದಲ್ಲಿ (ಕ್ರಿ. ಶ. ೧೧೮೭) ಲಕ್ಷ್ಮಣೇಶ್ವರ ದೇವರಿಗೆ ದತ್ತಿ ಬಿಟ್ಟ ಉಲ್ಲೇಖ ಅದೇ ಊರಿನ ಗೋಪಾಲಸ್ವಾಮಿ ಗುಡಿಯಲ್ಲಿ ಎಡಗಡೆ ಕಂಬದ ಮೊದಲನೇ ಸಾಲಿನಲ್ಲಿದೆ. ಯಾದವರ ಕೊನೆಯ ಪ್ರಸಿದ್ಧ ಚಕ್ರವರ್ತಿ ರಾಮಚಂದ್ರನ ಆಳಿಕೆಯ ಒಂದೇ ಒಂದು ಶಾಸನ ನಮಗೆ ಈ ಜಿಲ್ಲೆಯ ಜಿನಮಳ್ಳಿ

ಯಲ್ಲಿ ದೊರೆಯುತ್ತದೆ. ಇವನ ಸಾಮಂತರಲ್ಲಿ ಒಬ್ಬನಾದ ಶಿಲಾಹಾರ ಮನೆತನದ ವಿಜಯಪುರದ ಮಹಾಮಂಡಲೇಶ್ವರ ಮಾಯಿರಾಣಿ ಅಲ್ಲಿನ ಮಲ್ಲಿಕಾರ್ಜುನ ದೇವರಿಗೆ ದತ್ತಿ ಬಿಟ್ಟ ಉಲ್ಲೇಖವಿದೆ. ಈ ಶಾಸನದಲ್ಲಿ ಯಾದವ ಚಕ್ರವರ್ತಿಗಳು ಕಳಚುರಿ ರಾಯರ ಬಿರುದು ಬಾವಲಿಗಳನ್ನು ಧರಿಸಿದ್ದು ಗಮನಾರ್ಹವಾದ ಅಂಶವಾಗಿದೆ.

ಸಾಮಂತ ರಾಜ ಮನೆತನಗಳು

ಈ ಜಿಲ್ಹೆ ಪ್ರಸಿದ್ಧ ಸಾಮಂತ ಅರಸರ ನೆಲೆವೀಡೂ ಆಗಿತ್ತು. ಆ ಶಾಖೆಗಳನ್ನಿಲ್ಲಿ ಉಲ್ಲೇಖಿಸಲಾಗಿದೆ.

೧. ಶಿಲಾಹಾರರು

೨. ಹೈಹಯರು

೩. ಬಾಣರು

ಶಿಲಾಹಾರರು : ಈ ಜಿಲ್ಲೆಯ ಚಿನಮಳ್ಳಿ ಶಾಸನಾಧಾರದ ಮೇಲಿಂದ ಧನಸಂಗ್ರಹರಸನೆಂಬ ಶಿಲಾಹಾರ ಸಾಮಂತನೊಬ್ಬ ಅತ್ತಿನೂರು ೮೦ ರ "ಕಂಪಣವಾಡ"ವನ್ನಾಳುತ್ತಿದ್ದುದರ ವಿವರವಿದೆ. ಕೊಪಣಪುರವರಾಧೀಶ್ವರವೆಂಬ ಅಭಿಧಾನ ಇಲ್ಲಿನ ಮಹಾಮಂಡಲೇಶ್ವರ ಧನಸಂಗ್ರಹರಸನಿಗಿರುವದು ಗಮನಾರ್ಹ. ಇವನು ಚಿನಮಳ್ಳಿಯ ಮಲ್ಲಿಕಾರ್ಜುನ ದೇವಾಲಯದ ಸ್ಥಾನಿಕಾಚಾರ್ಯನಾದ ಶಿವ

ದೇವಯ್ಯನಿಗೆ ಕೆಲವು ದತ್ತಿಗಳನ್ನು ಬಿಟ್ಟುಕೊಟ್ಟುದರ ಮೇಲಿಂದ ಈ ಶಿಲಾಹಾರರು ಶಿವೋಪಾಸಕರಾಗಿದ್ದರೆಂದು ಊಹಿಸಬಹುದು. ಚಿನಮಳ್ಳಿಯ ಮತ್ತೊಂದು ಶಾಸನದಲ್ಲಿ 'ಮಾಯಿದೇವರಾಣಿ' ಎಂಬವನೂ ಸಹ ವಿಜಾಪೂರ ಶಾಖೆಯ ಶಿಲಾಹಾರ ಮನೆತನದ ಸಾಮಂತನಾಗಿದ್ದುದಾಗಿ ತಿಳಿದು ಬರುತ್ತದೆ. ಇವನ ಜೊತೆಗೆ ಬೊಪ್ಪದೇವ ಎಂಬ ಮತ್ತೊಬ್ಬ ಶಿಲಾಹಾರ ಸಾಮಂತನ ನಿರ್ದೇಶನವೂ ಇದೆ.

ಹೈಹಯರು : ಕಲಬುರಗಿ ಜಿಲ್ಲೆಯ ಶೇಡಂ ಮತ್ತು ಚಿತಾಪೂರ ತಾಲೂಕಿನ ಶಾಸನಗಳಲ್ಲಿ ಹೈಹಯ ಮನೆತನದ ಚರಿತ್ರೆ ಪರಿಶೋಧಿತವಾಗಿದೆ. ಡಾ|| ಫ್ಲೀಟ್ ಮತ್ತು ಡಾ|| ಬಾರ್ನೆಟ್ ಅವರು, ಚಿತಾಪೂರ ತಾಲೂಕಿನ ನಾಗಾಯಿ ಶಾಸನಗಳ ಬೆಳಕಿನಲ್ಲಿ ಹೈಹಯ ವಂಶದ ಉಲ್ಲೇಖವನ್ನು ಬಹುಹಿಂದೆಯೇ ಮಾಡಿದ್ದಾರೆ. (E. P. ind. Vol. XII PP. 269.291) ದಿಗ್ಗಾವಿ ಶಾಸನಗಳಲ್ಲಿ ಪಿರಿಯಮರಸನು (ಕ್ರಿ. ಶ. ೧೦೫೪) ಚಾಳುಕ್ಯ ಮೊದಲನೇ ಸೋಮೇಶ್ವರನ ಸಾಮಂತನಾಗಿಯೂ, ಅದೇ ಸ್ಥಳದ ಆರನೆಯ ವಿಕ್ರಮಾದಿತ್ಯನ ಆಳಿಕೆಯಲ್ಲಿ ಮನ್ನೆಯ ಲೋಕರಸನೆಂಬವನು ಈ ಹೈಹಯ ವಂಶದ ಪ್ರತಿನಿಧಿಯಾಗಿಯೂ ಕಾಣಿಸಿಕೊಂಡಿದ್ದಾರೆ. ಕ್ರಿ. ಶ. ೧೧೧೮ ರ ಚಾಳುಕ್ಯ ಆರನೆಯ ವಿಕ್ರಮಾದಿತ್ಯ ಮತ್ತು ಮೂರನೆಯ ಸೋಮೇಶ್ವರರ ಆಳಿಕೆಯ ಹಂದರಕಿ ಶಾಸನದಲ್ಲಿ ಉಲ್ಲೇಖಗೊಂಡ ಕೆಲವು ಸಾಮಂತರ ಹೆಸರುಗಳು ನಾಗಾಯಿ ಶಾಸನದ ಹೈಹಯ ವಂಶದವರಿಗೆ

ಸಂಬಂಧಿಸಿರಬಹುದೇ ಎಂಬ ಊಹೆಯನ್ನು ಡಾ|| ಪಿ. ಬಿ. ದೇಸಾಯಿ ಅವರು ಮಾಡಿದ್ದಾರೆ (Jainism in South India and some Jaina Epigraphs P. 214–15) ಅಲ್ಲಿನ ಲೋಕೇಶ್ವರ ದೇವಾಲಯದ ನಿರ್ಮಾತೃಗಳು ಹೈಹಯ ವಂಶದವರೆಂಬುದು ನಿರ್ವಿವಾದದ ವಿಚಾರ.

ಬಾಣರು : ಮಹಾಭಾರತಕಾಲದಿಂದಲೂ ಬಾಣರು ಕರ್ನಾಟಕದಲ್ಲಿ ಪ್ರಸದ್ಧರಾಗಿದ್ದರು. ಇವರಲ್ಲಿ ಶಿವಭಕ್ತಾಗ್ರೇಸರನಾದ ಬಾಣನ ಕೀರ್ತಿ–ಪ್ರತಿಷ್ಠೆಗಳನ್ನು ವರ್ಣಿಸುವ ಶಾಸನ ತೆಂಗಳಿಯಲ್ಲಿದೆ. ಇದು 'ಖಾಂಡವಮಂಡಲ'ವೆಂದು ಶಾಸನದಲ್ಲಿ ಉಲ್ಲೇಖಗೊಂಡಿದೆ. ಈ ಬಾಣವಂಶದಲ್ಲಿ ಪ್ರಸಿದ್ಧನಾದ ವೀರಗೊಂಕರಸನು ಅಲಂದೆ ಸಾಸಿರದ ಗೊಂಕನಾಡು ನೂಱುಪ್ಪತ್ತರ ಅಧಿಕಾರಿಯಾಗಿದ್ದನು. ಇವನು ನೂರ್ಮಡಿತೈಲನಿಗೆ ಸಾಮಂತನಾಗಿದ್ದು ಕ್ರಿ. ಶ. ೧೧೬೨ ರಲ್ಲಿ ಖಾಂಡವಮಂಡಲಕ್ಕೊಡೆಯನಾಗಿದ್ದನು. ಬಾಣ ವಂಶದ ಮತ್ತೊಬ್ಬ ಸಾಮಂತ ಬಿಬ್ಬರಸನು ಜೀವಣಿಕಾಪುರದಲ್ಲಿ ಸಹಸ್ರಲಿಂಗಸ್ಥಾಪನೆ, ನಂದಿಯ ಪ್ರತಿಷ್ಠೆ ಹಾಗೂ ಉಚಿತ ವಿವಾಹ ಕಲ್ಯಾಣಗಳನ್ನು ನೆರವೇರಿಸಿದನು. ವೀರಗೊಂಕನ ರಾಜನೀತಿ ಹಾಗೂ ವೀರಪರಾಕ್ರಮಗಳ ವರ್ಣನೆ ಈ ಜಿಲ್ಲೆಯ ಮರತೂರು, ಹುಣಸೀಹಡಗಲಿ, ಹೊಡಲು, ಹರಸೂರು ಮುಂತಾದ ಶಾಸನಗಳಲ್ಲಿ ಬರುತ್ತದೆ. ಇವನು ಬಿಬ್ಬೇಶ್ವರ ದೇವಸ್ಥಾನವನ್ನು ನಿರ್ಮಿಸಿದ ವಿಷಯವು ನಮಗೆ ತೆಂಗಾಳಿ ಶಾಸನದಿಂದ ಸ್ಪಷ್ಟವಾಗುತ್ತದೆ. ಬಾಣರು ಶಿವೋ

ಪಾಸಕರಾಗಿದ್ದರು. 'ಕೊಪಣಪುರವರಾಧೀಶ್ವರ'ವೆಂಬುದು ಅವರ ಅಭಿಧಾನಗಳಲ್ಲೊಂದಾಗಿತ್ತು.

ಮೇಲಿನ ಸಂಗತಿಗಳಿಂದ ಕಲಬುರಗಿ ಜಿಲ್ಲೆ ಕರ್ನಾಟಕದ ಪ್ರಸಿದ್ಧ ರಾಜಮನೆತನಗಳ ನಿಕಟ ಸಂಬಂಧವನ್ನು ಹೊಂದಿದ್ದು ತನ್ನದೇ ಆದ ರಾಜಕೀಯ ಇತಿಹಾಸವನ್ನು ಹೊಂದಿರುವುದು ಸ್ಪಷ್ಟವಾಗುತ್ತದೆ.

೪. ಆಡಳಿತ ವಲಯಗಳು ಮತ್ತು ಆಡಳಿತ ಪದ್ಧತಿ

ಕಲಬುರ್ಗಿ ಜಿಲ್ಲೆಯ ಶಾಸನಗಳಲ್ಲಿ 'ಕುಂತಲದೇಶ' ಅರ್ಥಾತ್ ಕರ್ನಾಟಕದ ವರ್ಣನೆ ಅನೇಕ ಕಡೆ ಬಂದಿದೆ. ಈ ವರೆಗಿನ ಚರಿತ್ರಕಾರರು ಕುಂತಳ ನಾಡಿನಲ್ಲಿ ಬನವಸೆ ೧೨,೦೦೦, ಹಾನುಗಲ್ಲು ೫೦೦, ಪುಲಿಗೆರೆ ೩೦೦, ಬೆಳ್ವೊಲ ೩೦೦, ಕೂಂಡಿ ೩೦೦, ಬೆಳಗಾವಿ ೭೦, ತೊರಗಲ್ಲು ೬೦೦೦' ಕೆಳವಾಡಿ ೩೦೦, ಕಿಸುಕಾಡು ೭೦, ಬಾಗಡಿಗೆ ೭೦, ತರ್ದವಾಡಿ ೧,೦೦೦ ಎಂಬ ಒಟ್ಟು ೧೧ ಪ್ರದೇಶಗಳನ್ನು ಗುರುತಿಸಿದ್ದಾರೆ. ಆದರೆ ಕಲಬುರಗಿ ಜಿಲ್ಲೆಯೂ ಸಹ ಈ ನಾಡಿಗೇ ಒಳಪಡುತ್ತಿರುವ ವಿಚಾರ ಇಲ್ಲಿ ಹೊಸತು. ಚಿನಮಳ್ಳಿ ಶಾಸನದಲ್ಲಿ 'ಧರಣೀಕಾಂತೆಯ ಕುಂತಳಮಿದೆನಿಸಿ ಕುಂತಳದೇಸಂ' ರಂಜಿಸಿದ್ದುದಾಗಿ ಹೇಳಿದೆ. ನಾಗಾಯಿಯ ಶಾಸನವೊಂದರಲ್ಲಿ

'ಸಕಳವಸುಮತೀ ತಳಕ್ಕೆ ತಲೆಯಿಂದೆನಿಸಿ ನೆಗಲ್ದ ಕುಂತಳಮಹೀ ತಳಕ್ಕೆ' ಎಂಬ ವರ್ಣನೆಯಿದೆ. ಅಲ್ಲಿನ ಆಳರಸರು, ಸಾಮಂತಸಚಿವರೂ ಸಹ ಈ ದೇಶನಾಮದಿಂದಲೇ ಪ್ರಕೀರ್ತಿತರಾಗಿದ್ದಾರೆ. ಹರಸೂರಿನ ಸಂಸ್ಕೃತ ಶಾಸನದಲ್ಲಿ ಕಳಚುರಿಯ ಬಿಜ್ಜಳನನ್ನು 'ಕುಂತಲ ಚಕ್ರವರ್ತಿ' ಎಂದು ವಿಶೇಷಿಸಿದೆ. ನಾಗಾಯಿಯ ೨ನೆಯ್ಕ ನಂಬರಿನ ಶಾಸನದಲ್ಲಿ ಚಾಳುಕ್ಯರ ೧ನೆಯ ಸೋಮೇಶ್ವರನನ್ನು 'ಕುಂತಳನೃಪಾಳ' ನೆಂದೂ, ಆ ಭೂಮಿಯನ್ನು 'ಬಳವತ್ ಕುಂತಳ ಭೂಮಿ' ಯೆಂದೂ, ಅವನ ಮಂತ್ರಿ ಮಧುವಪರಸದಣ್ಣಾಯಕನನ್ನು 'ಕುಂತಳ ರಾಜ್ಯಲಕ್ಷ್ಮೀಲತಾವಸಂತನುಂ' ಎಂದೂ ವರ್ಣಿಸಲಾಗಿದೆ. ಕುಂತಳ ದೇಶದಲ್ಲಿ ವಿಖ್ಯಾತವಾದ ಕಲಬುರಗಿ ಜಿಲ್ಲೆಯ ಅಂದಿನ ಪ್ರಮುಖ ನಾಡುಗಳೆಂದರೆ 'ಅಲಂದೆ ಸಾಸಿರದ' ನಾಡು 'ಅಱಲು ಮುನ್ನೂರರ' ಪ್ರದೇಶ, 'ಸಗರ ಐನೂರು' ಹಾಗೂ 'ಮಾನ್ಯದಡಿನಾಡು' ಮತ್ತು ಹಗರಟಗೆ ೩೦೦ ರ ನಾಡು. ಇವು ಆಡಳಿತದ ಮುಖ್ಯ ಪ್ರದೇಶಗಳಾಗಿದ್ದು ರಾಜಕೀಯ ಸಾಂಸ್ಕೃತಿಕ ದೃಷ್ಟಿಯಿಂದ ಗಮನಾರ್ಹವಾಗಿವೆ. ಇಲ್ಲಿ ಅವುಗಳ ಸಂಕ್ಷಿಪ್ತ ವಿವರಣೆಯಿದೆ.

ಅಲಂದೆ ಸಾಸಿರದ ನಾಡು

ಇದು ಕಲಬುರಗಿ ಜಿಲ್ಲೆಯ ಆಡಳಿತ ಚರಿತ್ರೆಯಲ್ಲೀ ಅತೀ ದೊಡ್ಡ ವಿಭಾಗವಾಗಿದ್ದು, ಒಂದು ಸಾವಿರ ಹಳ್ಳಿಗಳ

ಪ್ರಭುತ್ವವನ್ನು ಪಡೆದಿತ್ತು. ನಿಂಬರಗಿಯ ಶಾಸನ ಇದನ್ನು 'ನಾಡುಗಳರಸ' ಎಂದು ವಿಶೇಷಿಸಿದೆ. ಅಲಂದೆ ಸಾಸಿರದ ನಾಡಿನಲ್ಲಿ 'ಗೊಂಕನಾಡು ನೂರಿಪ್ಪತ್ತು' ಮತ್ತು ಅತ್ತ-ನೂರು ಎಂಬತ್ತು' ಎಂಬ ಮತ್ತೆರಡು ಉಪ ವಿಭಾಗಗಳು ಸಮಾವೇಶಗೊಳ್ಳುತ್ತವೆ. ಗೊಂಕನಾಡು ಇಂದಿನ ಚಿತಾಪೂರ ತಾಲೂಕಿನ ಮರ್ತೂರು, ತೆಂಗಳ ಕೀರಣಗಿ ಹಳ್ಳಿಗಳನ್ನೊಳಗೊಂಡಿದ್ದು ಪುರಾಣ ಕಾಲದಿಂದಲೂ ಇದು 'ಖಾಂಡವ ಮಂಡಲ' ವೆಂದು ಪ್ರಸಿದ್ಧವಾಗಿತ್ತು. ಇದು ಕಲಬುರಗಿ ಪಶ್ಚಿಮದಲ್ಲಿ ಹುಣಸೀ ಹಡಗಲಿಯುವರೆಗೆ ವ್ಯಾಪಿಸಿತ್ತು. ಉತ್ತರಕ್ಕೆ ಆಳಂದ ತಾಲೂಕಿನ ಹೊಡಲು ಇದರ ಮೇರೆಯಾಗಿತ್ತು. ಚಿಂಚೋಳಿ ತಾಲೂಕಿನ ಹರಸೂರ ಸಹ ಇದರಲ್ಲೇ ಸೇರಿದ್ದಾಗಿ ತಿಳಿಯುತ್ತದೆ. ತೆಂಗಳಿ ಶಾಸನದಲ್ಲಿ ಇಲ್ಲಿ ಆಳಿದ ಪುರಾಣಪ್ರಸಿದ್ಧ ಬಾಣವಂಶಜರ ರಾಜ್ಯಾಡಳಿತೆಯ ಉಲ್ಲೇಖವಿದೆ. ಚಾಳುಕ್ಯ ನೂರ್ಮಡಿ ತೈಲಪನ ಕಾಲದಲ್ಲಿ ಬಾಣವಂಶದ ನಾಚರಸ ದಣ್ಣಾಯಕನು 'ಖಾಂಡವ ಮಂಡಲ' ವೆಂದು ಪ್ರಸಿದ್ಧವಾದ ಗೊಂಕನಾಡಿನ ತೆಂಗಳಿಯಲ್ಲಿ ಕಟ್ಟಿಸಿದ ನಾಚೇಶ್ವರ ದೇವರಿಗೆ ದತ್ತಿ ಬಿಟ್ಟ ವಿವರವಿದೆ. ಚಾಳುಕ್ಯ ತ್ರಿಭುವನಮಲ್ಲದೇವನ ಕಾಲದ ಮರ್ತೂರ ಶಾಸನದಲ್ಲಿ ಅಲಂದೆ ಸಾಸಿರ ನಾಡನ್ನು ಮಹಾಮಂಡಲೇಶ್ವರ ಬಿಬ್ಬರಸನು ಆಳುತ್ತಿದ್ದಾಗ ಅವನಿಗೆ ಆಧೀನನಾಗಿ ವೀರ ಗೊಂಕನು ಈ ಪ್ರದೇಶವನ್ನು ನೋಡಿಕೊಳ್ಳುತ್ತಿದ್ದನು. ತತ್ಪ್ರಯುಕ್ತ ಇದಕ್ಕೆ 'ಗೊಂಕನಾಡು' ಎಂದು ಹೆಸರಾಗಿರಲೂ ಸಾಧ್ಯ. ಮರ್ತೂರು, ಗೊಂಕನಾಡಿನ ಪ್ರಸಿದ್ಧ ಅಗ್ರ

ಹಾರಗಳಲ್ಲಿ ಒಂದಾಗಿತ್ತು. ಕಳಚುರಿ ಮನೆತನದ ರಾಯ ಮುರಾರಿ ಸೋಮಿದೇವನ ಆಳಿಕೆಯ ಕ್ರಿ. ಶ. ೧೧೭೨ ರಲ್ಲಿ ದೊರೆತ ಹರಸೂರ ಶಾಸನದಲ್ಲಿ ಮಾಧವ ಮಂತ್ರಿಯೆಂಬವನು ಗೊಂಕನೂರಿಪ್ಪತ್ತರ ಪ್ರದೇಶದ ಅಂಕಬಾಡಿನಲ್ಲಿ ಸಮಾವೇಶವಾದ ಒಂದು ಹಳ್ಳಿ ಅಂಕಲಗಿಯನ್ನು ಭೋಗೇಶ್ವರ ದೇವಾಲಯಕ್ಕೆ ಉಂಬಳಿಯಾಗಿ ಕೊಟ್ಟ ವಿವರವಿದೆ. ಅಲಂದೆಯ ಒಂದು ಶಾಸನದ ಪ್ರಕಾರ, ಯುವರಾಜ ಮಲ್ಲಿಕಾರ್ಜುನನು ಅಲಂದೆ ಸಾಸಿರದ ಮೊರಂಬ ೮೪ರ ಭಾಗವನ್ನು ಕುಮಾರವೃತ್ತಿಯಿಂದ ಆಳುವ ಸಂಗತಿ ತಿಳಿದು ಬರುತ್ತದೆ.

ಅಲಂದೆ ಸಾಸಿರದ ಇನ್ನೊಂದು ಭಾಗವಾದ 'ಅತ್ತನೂರು ೮೦'ರ ಪ್ರದೇಶವು ಮುಖ್ಯವಾಗಿ ತರ್ದವಾಡಿ ನಾಡಿನ ಸೀಮೆಗೆ ಸಮೀಪಿಸಿದರೂ ಇದು ಅಲಂದೆ ಸಾಸಿರದ ಪ್ರಭುತ್ವಕ್ಕೇ ಒಳಪಟ್ಟಿತ್ತು. ಅತ್ತನೂರು ಇಂದಿನ ಅಫಜಲಪೂರ ತಾಲೂಕಿನಲ್ಲಿದೆ. ಶಾಸನಗಳಲ್ಲಿ ಅದನ್ನು 'ಹಸ್ತಿನಾಪುರ'ವೆಂದು ವರ್ಣಿಸಿದೆ. ಅತ್ತನೂರು ೮೦ರ ಪ್ರದೇಶದಲ್ಲಿ ಶಿಲಾಹಾರ ಶಾಖೆಯ ಕೆಲವು ಮಂಡಲಾಧಿಕಾರಿಗಳು ರಾಜ್ಯಭಾರ ಮಾಡಿದ ವಿಷಯ ಗೊತ್ತಾಗುತ್ತದೆ. ಜಿನಮಳ್ಳಿಯು ಈ ವಿಭಾಗಕ್ಕೆ ಸೇರಿದ ಶ್ರೇಷ್ಠ ಸಾಂಸ್ಕೃತಿಕ ಸ್ಥಳವಾಗಿತ್ತು. ಅಲ್ಲದೆ 'ಮಣಿಯೂರು' ಎಂದರೆ ಈಗಿನ ಮಾಶಾಳ ಹತ್ತಿರದ 'ಮಣೂರು ೧೨'ರ ಅಗ್ರಹಾರವೂ ಸಹ ಅತ್ತನೂರಲ್ಲಿ ವಿಲೀನವಾಗಿದ್ದುದಾಗಿ ಅಲ್ಲಿಯ ತ್ರಿಭುವನ

ಮಲ್ಲ ೬ ನೆಯ ವಿಕ್ರಮಾದಿತ್ಯನ ಕಾಲದ ಒಂದು ಶಾಸನದಿಂದ ಗೊತ್ತಾಗುತ್ತದೆ. ಅಫಜಲಪೂರ ಆಳಂದ, ಗುಲಬರ್ಗ ಹಾಗೂ ಚಿತಾಪೂರ ತಾಲೂಕಿನ ಕೆಲಭಾಗ ಹಾಗೂ ಚಿಂಚೋಳಿಯ ಪಶ್ಚಿಮದ ಮೇರೆಗಳು ಇದರಲ್ಲಿ ಸಮಾವೇಶಗೊಂಡಿದ್ದುವೆನ್ನಬಹುದು.

ಅಱಲು ಮುನ್ನೂರು :

ಕಲಬುರ್ಗಿ ಜಿಲ್ಲೆಯ ಇಂದಿನ ಸೇಡಂ ಮತ್ತು ಚಿತಾಪೂರ ತಾಲುಕಿನ ಬಹುತೇಕ ಭಾಗಗಳು ಇದರಲ್ಲಿ ವಿಲೀನವಾಗಿದ್ದವು. ಇದು ಅಱಲೂರು > ಅಱಲು > ಅರಲು ಎಂದು ಮಾರ್ಪಾಡಾಗಿದೆ. ಶೇಡಂ ತಾಲುಕಿನ ಇಂದಿನ ಅಲ್ಲೂರು ಈ ಖ್ಯಾತಿವೆತ್ತ ನಾಡಾಗಿತ್ತೆಂದು ನಿಶ್ಚಯಿಸಲಾಗಿದೆ. 'ಪಂದಿರ್ಕೆ' ಅಥವಾ ಹಂದರಕಿ ಶಾಸನದಲ್ಲಿ ಚಾಳುಕ್ಯ ೬ ನೆಯ ವಿಕ್ರಮಾದಿತ್ಯನ ಆಳಿಕೆಯಲ್ಲಿ (ಕ್ರಿ. ಶ. ೧೧೧೮) ಮಹಾಮಂಡಳೇಶ್ವರ ಲೋಕರಸನು 'ಅಱಲು ಮುನ್ನೂರ' ನ್ನಾಳುತ್ತಿದ್ದ ವಿಷಯವಿದೆ. ಅದರಲ್ಲಿ ಬಾಡಂಗುಂಡಿ ಮತ್ತು ತುರುವಳಿಗೆ ಹಳ್ಳಿಗಳನ್ನು ಲೋಕರಸನು ಹಂದರಕಿಯ ಲೋಕೇಶ್ವರ ದೇವಾಲಯಕ್ಕೆ ಉಂಬಳಿಯಾಗಿತ್ತ ವಿಷಯವಿದೆ. ಚಾಳುಕ್ಯ ೨ ನೆಯ ತ್ರಿಭುವನಮಲ್ಲನ ಕಾಲದ ಕಮರಡಗಿ ಶಾಸನದಲ್ಲಿ 'ಅಱಲು ಮುನ್ನೂರ'ನ್ನು ಹೈಹಯ ಮನೆತನದ ಆನೆಮರಸನು ಆಳುತ್ತಿದ್ದುದಾಗಿ ಹೇಳಿದೆ. ಆರನೆಯ ವಿಕ್ರಮಾದಿತ್ಯನ ಸುಪ್ರ

ಸಿದ್ಧ ರಾಣಿ ಜಾಕಲದೇವಿಯರು ಸಹ ಈ ನಾಡನ್ನಾಳುವ ಸಂಗತಿ ಚಿತಾಪೂರ ತಾಲೂಕಿನ ಇಂಗಳಿಗಿ ಶಾಸನದಿಂದ ಗೊತ್ತಾಗುತ್ತದೆ. ಕರ್ನಾಟಕದ ಪ್ರಾಚೀನ ಮಹಾವಿದ್ಯಾ ಕೇಂದ್ರವನ್ನು ಹೊಂದಿದ ನಾಗಾಯಿ ಅಗ್ರಹಾರವು ಈ ಅಱಿಲು ಮುನ್ನೂರಿನಲ್ಲೇ ಇದ್ದುದು ವಿಶೇಷ ಸಂಗತಿ ಯಾಗಿದೆ. ನಾಗಾಯಿಯ ಶಾಸನದಲ್ಲಿ 'ಕುಂತಳ ಮಹೀ ತಳಕ್ಕೆ ಮುಖವೆಂಬನ್ತಿರ್ದ್ದಱಿಲು ಮುನೂರರ್ಕೆ ತಿಳಕ ಮಪ್ಪನ್ತಿರ್ದ್ದ ಮಹಾಗ್ರಹಾರಂ ನಾಗವಾವಿ' ಎಂದು ಅದನ್ನು ಬಣ್ಣಿಸಲಾಗಿದೆ. ವಾಡಿಯ ಹತ್ತಿರದ 'ಪಲ್ಲಕಱಂಟಿಗೆ' ಅರ್ಥಾತ್ ಇಂದಿನ ಹಲಕರಟಿಯೂ ಸಹ ಈ ನಾಡಿಗೇ ಒಳ ಪಟ್ಟುದಾಗಿ ಅಲ್ಲಿನ ವೀರಭದ್ರ ದೇವಸ್ಥಾನದಲ್ಲಿ ಚಾಳುಕ್ಯ ರಸರ ಕಾಲದ ಒಂದು ಶಾಸನ ತಿಳಿಸುತ್ತದೆ.

ಸಗರ ಐನೂರು :

ಇದು ಇಂದಿನ ಜೇವರಗಿ, ಶಹಪುರ ಮತ್ತು ಸುರಪುರ ಈ ಮೂರು ತಾಲೂಕಗಳನ್ನೊಳಗೊಂಡ ಪ್ರದೇಶ. ಈ ಜಿಲ್ಹೆಯ ಪ್ರಮುಖ ನದಿಗಳಾದ ಭೀಮಾ-ಕೃಷ್ಣಾ ನದಿಗಳ ನಡುವಣ ಫಲವತ್ತಾದ ಪ್ರದೇಶವೆಂದರೆ ಸಗರನಾಡು, ಸಗರ ಗಡ್ಡೆ. ನಂಜುಂಡನ ರಾಮನಾಥ ಚರಿತ್ರೆಯಲ್ಲಿ ಇದನ್ನು ಸಗರದಾನವೆಂದೂ ಕರೆಯಲಾಗಿದೆ. ಪುರಾಣಪ್ರಸಿದ್ಧ ಸಗರ ಚಕ್ರವರ್ತಿಗೂ ಈ ನಾಡಿಗೂ ಸಂಬಂಧ ಕಲ್ಪಿಸಲಾಗಿದೆ. ರಾಷ್ಟ್ರಕೂಟದ ಕಾಲದ ಶಾಸನ ಪ್ರಮಾಣಗಳಿಂದ ಚಾರಿತ್ರಿಕ

ವಾಗಿ ಈ ನಾಡು ಅಲಂದೆ ಸಾಸಿರ ಮತ್ತು ಅಱಲು ಮುನ್ನೂರರ ಪ್ರದೇಶಕ್ಕಿಂತ ಹೆಚ್ಚಿನ ಹಳಮೆಯನ್ನು ಹೊಂದಿರುವದಾಗಿ ತಿಳಿದು ಬರುತ್ತದೆ. ರಾಷ್ಟ್ರಕೂಟ ೩ನೆಯ ಕೃಷ್ಣನ (ಕ್ರಿ. ಶ. ೯೩೮-೯೬೮) ಕಾಲದಲ್ಲಿ 'ಬುಧರಾಜ ಸಾಮಂತಾಧಿಪತಿ' ಸಗರನಾಡ ಅಲ್ಲವುಂಡ ಚಂದಯ್ಯಸ್ವಾಮಿ, ಎಂಬ ಓರ್ವ ಅಧಿಕಾರಿಯ ಉಲ್ಲೇಖ ಶಿರಿವಾಳದಲ್ಲಿ ದೊರಕಿದ ಇತ್ತೀಚಿನ ಶಾಸನದಲ್ಲಿದೆ.

ರಾಷ್ಟ್ರಕೂಟರಾಳ್ವಿಕೆಯ ಅನಂತರ ಸಗರನಾಡು ಚಾಳುಕ್ಯರ ಅಧಿಪತ್ಯಕ್ಕೊಳಗಾಯಿತು. ಇಲ್ಲಿ ಚಾಳುಕ್ಯ ದೊರೆಗಳಿಗೆ ಸಂಬಂಧಿಸಿದ ಶಾಸನಗಳು ಯಥೇಷ್ಟವಾಗಿ ದೊರಕುತ್ತವೆ. ಜಗದೇಕಮಲ್ಲ ಬಿರುದಾಂಕಿತ ೨ ನೆಯ ಜಯಸಿಂಹನ ಕಾಲದ ದೇವಪುರ ಶಾಸನದಲ್ಲಿ (ಕ್ರಿ. ಶ. ೧೦೪೦) ರೇವರಸ ದಂಡನಾಯಕನು ಈ ಭಾಗದ ಒಡೆಯನಾಗಿದ್ದುದಾಗಿ ಉಲ್ಲೇಖವಿದೆ. ಪ್ರಾಚೀನ ಶಾಸನಗಳಲ್ಲಿ ಸಗರನಾಡು ೩೦೦ ರ ಪ್ರದೇಶವಾಗಿತ್ತೆಂಬುದಕ್ಕೂ ನಮಗೆ ಆಧಾರಗಳು ದೊರಕುತ್ತವೆ. ಕ್ರಿ. ಶ. ೧೧೦೫ರ ಆರನೆಯ ವಿಕ್ರಮಾದಿತ್ಯನ ಶಾಸನದಲ್ಲಿ ರವಿಯಣ ಭಟ್ಟ ದಂಡನಾಯಕನು ಸಗರ ೩೦೦ ನ್ನಾಳುತ್ತಿದ್ದ ವಿಷಯವಿದೆ. ಅದಕ್ಕೂ ಪೂರ್ವದ ಕ್ರಿ. ಶ. ೧೦೫೪ರ ಕೆಂಭಾವಿ ಶಾಸನ ಹಾಗೂ ಕ್ರಿ. ಶ. ೧೦೭೭ ನೆಯ ಏವೂರ ಶಾಸನದಲ್ಲೂ ಸಗರ ೩೦೦ ನಾಡೆಂದೇ ಉಲ್ಲಿಖಿತಗೊಂಡಿದೆ. ಆದರೆ ಕ್ರಿ. ಶ. ೧೧೨೯ ರ ಹೀರೇಮುದನೂರಿನ ಒಂದು ಶಾಸನದಲ್ಲಿ 'ಸಗರ ೫೦೦' ಎಂಬ ಹೆಸರು ಮೂರು

ಕಡೆಗೆ ಬಂದಿದೆ. 'ಸರ್ವಜ್ಞ ಚಕ್ರವರ್ತಿ' ಬಿರುದಾಂಕಿತ ಚಾಳುಕ್ಯ ಭೂಲೋಕಮಲ್ಲನ ಆಳಿಕೆಯ ೧೨ ನೆಯ ವರುಷ ದಲ್ಲಿ (ಕ್ರಿ. ಶ. ೧೧೩೭) ಶಿರಿವಾಳದಲ್ಲಿ ದೊರೆತ ಒಂದು ಶಾಸನದಲ್ಲಿ ಭೂಲೋಕಮಲ್ಲನ ಮಂತ್ರಿ ಸೋವಿದೇವರಸನು 'ಸಗರವೆಯನೂಱರ ಬಾಡ'ದ ಹೆಗ್ಗಡೆದಣ್ಣಾಯಕ ಅಲ್ಲಿಪೂರಿ ಯರಸ ಹಾಗೂ ಸಿರಿವೊಳಲಿನ ನಾಲ್ವರು ಸೆಟ್ಟಿಯರು ಸಮೇತ ವಾಗಿ ಅಲ್ಲಿನ ಕದಂಬೇಶ್ವರ ದೇವಾಲಯದ ಜೀರ್ಣೋದ್ಧಾರಕ್ಕೆ ದತ್ತಿಬಿಟ್ಟ ವಿಷಯ ಬಂದಿದೆ.

ಮುದನೂರಿನಲ್ಲಿ ಗೊಪಾಲಸ್ವಾಮಿ ಹಾಗೂ ರಾಮೇಶ್ವರ ದೇವಾಲಯಗಳಲ್ಲಿನ ಚಾಳುಕ್ಯರ ಕಾಲದ ಹತ್ತಾರು ಶಾಸನ ಗಳಲ್ಲಿ 'ಸಗರ ಐನೂರು' ಪ್ರದೇಶದ ಉಲ್ಲೇಖವಿದೆ. ಕಳಚೂರಿ ರಾಯಮುರಾರಿಯ ಕೊಲ್ಲೂರು ಶಾಸನ (ಕ್ರಿ. ಶ. ೧೧೬೯)ದಲ್ಲಿ 'ಸಗರ ೫೦೦' ಕಾಣಿಸಿದೆ. ಮುದನೂರಿನ ಗೋಪಾಲಸ್ವಾಮಿಯ ದೇವಾಲಯದಲ್ಲಿ ದೊರಕಿದ 'ಯಾದವ ನಾರಾಯಣ' ಪ್ರತಾಪ ಚಕ್ರವರ್ತಿ ಸಿಂಘಣ ದೇವನ ಆಳಿಕೆಯ ಮೊದಲ ವರ್ಷದ ಒಂದು ಶಾಸನದಲ್ಲಿ ಅಯ್ಯಾವೊಳೆಯ ಐನೂರು ಸ್ವಾಮಿಗಳ ಉಲ್ಲೇಖವಿರುವದಲ್ಲದೆ ಸಗರರೆಯಿನೂರುಂಬಾಡದ ಸೆಟ್ಟಿ ಯರು ಎಂಬ ಪ್ರಯೋಗವಿರುವದರಿಂದ ಸಗರ ಐನೂರು ಒಂದು ವಣಿಕ್ ಕೇಂದ್ರವಾಗಿದ್ದಿತಾಗಿ ತಿಳಿದುಬರುತ್ತದೆ. ಸಗರ ೩೦೦ ರ ನಾಡು ಸಗರ ೫೦೦ ಆದ ಕಾಲಾವಧಿಯ ಬಗೆಗೆ ಡಾ|| ಫ್ಲೀಟ್‌ರು ಯೋಚಿಸಿ ಹಿಂದೆ ಬರೆದಿದ್ದಾರೆ. (Epigraphia Indica. Vol. XII. P. 269). ಒಟ್ಟಿನಲ್ಲಿ

ಸಗರ ೩೦೦ ನ್ನು ಉಲ್ಲೇಖಿಸಿರುವ ಅತ್ಯಂತ ಪ್ರಾಚೀನ ಶಾಸನ ಕೆಂಭಾವಿಯದು. ಸಗರ ೫೦೦ ರನ್ನು ಉಲ್ಲೇಖಿಸಿರುವ ತೀರ ಪ್ರಾಚೀನ ಶಾಸನ ಕ್ರಿ. ಶ. ೧೧೭೯ ರ ಹಿರೇಮುದನೂರಿನದು. ಎಷ್ಟೋ ವೇಳೆ ಇದರ ಗಡಿಗೆರೆಗಳು ಭೀಮಾ-ಕೃಷ್ಣಾ ನದಿಗಳ ಆಚೆಗಿನ ಗಡುವನ್ನು ಸಹ ವ್ಯಾಪಿಸಿರುವುದಾಗಿ ತಿಳಿಯುತ್ತದೆ. ೧೪೫೯ ರಲ್ಲಿ ಲಿಖಿತವಾದ ಶಿರಿವಾಳದ ಮತ್ತೊಂದು ಶಾಸನದಲ್ಲಿ ಕಲಬುರಿಗಿ ನಾಡಿನ ಜೊತೆಗೆ ಸಗರ ನಾಡಿನ ಉಲ್ಲೇಖವೂ ಇದೆ. ಇದರಿಂದ ಉತ್ತರಕ್ಕೆ ಭೀಮಾ ನದಿಯ ಗಡಿಗೆರೆಗಳನ್ನು ದಾಟಿ ಕಲಬುರ್ಗಿಯ ವರೆಗೂ ಇದು ವ್ಯಾಪಿಸಿತ್ತೆಂದು ಸಂಭಾವಿಸಬಹುದಾಗಿದೆ. ಈಗ ಜೇವರಗಿ ತಾಲೂಕಿನಲ್ಲಿರುವ ಎಡ್ರಾಮಿಯ ಚಾಳುಕ್ಯರ ಕಾಲದ ಶಾಸನದಲ್ಲಿ ಎಳಮಲೆ ನಾಡಿಗೆ ಮೇರೆಯಾಗಿತ್ತೆಂದು ಗೊತ್ತಾಗುತ್ತದೆ.

'ಮನ್ನೆದಡಿ ಸಾಸಿರನಾಡು'

ಈಗಿನ ಚಿತಾಪುರ ತಾಲೂಕಿನ ಹೆಬ್ಬಾಳ, ಕೋರವಾರ ಮೊದಲಾದ ಬೆಣ್ಣೆತೊರೆ ಸೀಮೆಯ ಉತ್ತರ ಭಾಗವು 'ಮನ್ನೆದಡಿ ಸಾಸಿರನಾಡೆ'ಂದು ಪ್ರತೀತಿಗೊಳಗಾಗಿತ್ತು. ಇದರ ರಾಜಧಾನಿ ಕಾಳಿಗೆ. ಈಗಲೂ ಕಾಳಿಗೆಯು ಪುರಾತನ ದೇವಾಲಯಗಳುಳ್ಳ ಪುಣ್ಯತೀರ್ಥ ಕ್ಷೇತ್ರವೆನಿಸಿದೆ. ಬಾಣವಂಶಾನ್ವಿತ ವೀರಗೊಂಕನು ಕ್ರಿ. ಶ. ೧೨೦೦ ರಲ್ಲಿ ಈ ಮನ್ನೆದಡಿ ನಾಡನ್ನಾಳುತ್ತಿದ್ದುದಾಗಿ ಕಾಳಿಗಿ ಶಾಸನ ನಿರ್ದೇಶಿಸಿದೆ. ಕಳಚುರಿಯ

ರಾಯಮುರಾರಿ ಸೋಯಿದೇವನ ಆಳಿಕೆಯಲ್ಲೂ ಸಹ ಕಾಳಿಗೆ ಮನ್ನೆದಡಿ ನಾಡಿನ ಮುಖ್ಯ ಪಟ್ಟಣವಾಗಿತ್ತೆಂಬ ಸಂಗತಿ ಅಲ್ಲಿನ ಮತ್ತೊಂದು ಶಾಸನದಿಂದಲೂ ನಮಗೆ ಗೊತ್ತಾಗುತ್ತದೆ. ಈ ಭಾಗದ ಹೆಚ್ಚು ಹೆಚ್ಚು ಶಾಸನಗಳು ಬೆಳಕಿಗೆ ಬಂದರೆ ಮನ್ನೆದಡಿ ನಾಡಿನ ದಟ್ಟ ಪರಿಚಯವುಂಟಾಗಲು ಸಾಧ್ಯ. ಕ್ರಿ. ಶ. ೧೦೦೮ ರ **ತ್ರಿಭುವನಮಲ್ಲದೇವರ** ತೆಂಗಳಿ ಶಾಸನದಲ್ಲಿ 'ಮನ್ನೆದಡಿ ೩೦೦ ಕ್ಕೆ ರಾಣಿಮೈಳಾಲದೇವಿ ಒಡತಿಯಾಗಿದ್ದ ವಿವರವಿದೆ. ಇದರಿಂದ ಮನ್ನೆದಡಿ ನಾಡಿನ ಭೂಪ್ರದೇಶದ ವ್ಯಾಪ್ತಿಯ ಬಗೆಗೆ ಇನ್ನೂ ಸಂದಿಗ್ಧತೆಯಿದೆ. ಇದು ಮಾನ್ಯದ ಭೂಮಿಯೋ ಅಥವಾ ಮನ್ನೆಯರ ನಾಡೋ ಒಟ್ಟಿನಲ್ಲಿ ಈ ಹೆಸರು ತುಂಬ ಮಹತ್ವದ್ದಾಗಿದೆ.

ಸುರಪುರ ತಾಲೂಕಿಗೆ ಮೇರೆಯಾಗಿ **ಹಗರಟಿಗೆನಾಡು** ೩೦೦ ಹಳ್ಳಿಗಳ ಘಟಕವಾಗಿ ಯಾದವರ ಕಾಲಕ್ಕೆ ಅಸ್ತಿತ್ವದಲ್ಲಿತ್ತು. ಈ ನಾಡು ಪುರಾಣಕಾಲದ ಪ್ರಾಚೀನ ಅವಶೇಷಗಳನ್ನು ಹೊಂದಿರುವದು ಒಂದು ವಿಶೇಷ. ಇವೆಲ್ಲವೂ ಈ ಜಿಲ್ಲೆಯ ಐತಿಹಾಸಿಕ ನಕಾಶೆಯನ್ನು ನಿರ್ದಿಷ್ಟಪಡಿಸಲು ಪೋಷಕವಾಗಿವೆ. ಅಲ್ಲದೆ, ಅತ್ತಿನೂರು **ಕೋಂಟೆ** ಮಳೆಯ **ಖೇಡ'** **'ಕಂಪಣನಾಡ'** ಹಸ್ತಿನಾಪುರ (ಅತ್ನೂರು) 'ಅಜಿಲು ಮುನ್ನೂಱರಬಳಿಯ **ವಾಡ'** 'ಮನ್ನೆಯ ಕೆರೆಯ **ನೆಲೆವೀಡು'** 'ಕುಂತಳ ವಿಷಯ ಆಲಂದೆ **ಸಾಸಿರನಾಡು'** 'ಖಾಂಡವ **ಮಂಡಲ'** ಎಂಬೀ ಕಡೆಗಳಲ್ಲಿ ಬಂದಿರುವ ಪದ

ಗಳು ಆಡಳಿತ ವಲಯದ ಮುಖ್ಯ ಘಟಕಗಳಾಗಿರುವದು ಗಮನಾರ್ಹವಾಗಿದೆ.

ಆಡಳಿತ ಪದ್ಧತಿ

ಇಲ್ಲಿ ಆಳಿದ ರಾಜಮನೆತನಗಳು ರಾಜ್ಯದಲ್ಲಿ ಉತ್ತಮ ಆಡಳಿತವನ್ನು ನೆಲೆಗೊಳಿಸಿದ್ದುವು. ವಿಶಾಲವಾದ ರಾಜ್ಯವನ್ನು ಆಡಳಿತ ಘಟಕಗಳಲ್ಲಿ ಹಂಚಲಾಗಿತ್ತು. ಅಗ್ರಹಾರದ ಮಹಾಜನಗಳು ಗೌಡ, ನಾಡಶೆಟ್ಟಿ, ನಕರ, ಸಾಮಂತ ಅಥವಾ ಮಹಾಮಂಡಲೇಶ್ವರರು ಅಲ್ಲದೆ ರಾಣಿಯರು ಯುವರಾಜರು ರಾಜಕೀಯ ಆಡಳಿತದಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದರು. ಅಲಂದೆಯ ಶಾಸನದಲ್ಲಿ (ಕ್ರಿ. ಶ. ೧೦೮೨) ವಿಕ್ರಮಾದಿತ್ಯನ ಆಳಿಕೆಯನ್ನು ಪ್ರಶಂಸಿಸುತ್ತ 'ಕೃತಯುಗವಾದುದು ಕಲಿಯುಗಂ ಅತಿ ಧಾರ್ಮಿಕವಾಯ್ತು ವಿಕ್ರಮಾದಿತ್ಯ ನೃಪಂ ಪ್ರತಿಪಾಳಿಪ ರಾಷ್ಟ್ರಂ' ಎಂಬುದು ಅತ್ಯಂತ ಮಾರ್ಮಿಕವಾಗಿದೆ. ಎಷ್ಟೋ ಮಂತ್ರಿಗಳು ರಾಜನೀತಿನಿಪುಣರಷ್ಟೇ ಆಗಿರದೆ ಸುಸಂಸ್ಕೃತರೂ ಶ್ರೇಷ್ಠ ವಿದ್ವಾಂಸರೂ ಆಗಿರುತ್ತಿದ್ದರು. ರಾಷ್ಟ್ರಕೂಟ ಅಕಾಲವರ್ಷನ (ಕ್ರಿ. ಶ. ೯೩೯–೯೬೯) ಓರ್ವ ಮಂತ್ರಿಗೆ 'ಬುಧರಾಜ ಸಾಮಂತಾಧಿಪತಿ' ಎಂಬ ವಿಶೇಷಣವಿತ್ತು. ವಿಕ್ರಮಾದಿತ್ಯನ ಮಂತ್ರಿ ಬಿಜ್ಜರಸನಿಗೆ 'ಸತ್ಯರಾಧೇಯ ಶಿಷ್ಟಜನ ಪೋಷಣ' ಎಂಬುದಾಗಿ ಮತ್ತೂರು ಶಾಸನ ವರ್ಣಿಸುತ್ತದೆ. ಕೆಲವರು ಶ್ರೇಷ್ಠ 'ಸಂಧಿ ವಿಗ್ರಹಿ'ಗಳೂ ಆಗಿದ್ದರು. ಬಿಬ್ಬರಸ

ಮಂತ್ರಿಗೆ ತುರಗ ರೇವನು ಹರಸೂರ ಶಾಸನದಲ್ಲಿ ರಾಮ ಮುರಾರಿ ಸೋಮಿದೇವನನ್ನು 'ಮಾಂಧಾತ ಚಕ್ರವರ್ತಿ' ಎಂದು ವಿಶೇಷಿಸಿದೆ. ಅವನ ಮಂತ್ರಿ ಮಾಧವನನ್ನು ಬಾಹತ್ತರ ನಿಯೋಗಾಧಿಪತಿ ಎಂದು ವಿಶೇಷಿಸಿದೆ. ಇದು ತಂತ್ರಪಾಳ ವೃತ್ತಿಯಾಗಿತ್ತು. ನಾಗಾಯಿ ಶಾಸನದಲ್ಲಿ 'ಚಾಳುಕ್ಯರಾಜ್ಯಸಮುದ್ಧರಣ'ನೆನ್ನಿಸಿದ ಕಾಳಿಮರಸನನ್ನು 'ಕನ್ನಡಸಂಧಿವಿಗ್ರಹಿ' ಎಂದು ಹೇಳಿದೆ. ಕೆಲವರು ಮಂತ್ರಿಗಳು 'ಬೀಳಾನುವೃತ್ತಿ'ಯಿಂದಲೂ ರಾಜ್ಯವಾಳುತ್ತಿದ್ದ ಉಲ್ಲೇಖಗಳಿವೆ. ಲೋಕಭೂಪನು ಅಜಿಲು ೩೦೦ ನ್ನು ಬೀಳಾನುವೃತ್ತಿಯಿಂದ ಆಳುತ್ತಿದ್ದುದಾಗಿ ನಾಗಾಯಿ ಶಾಸನ ತಿಳಿಸುತ್ತದೆ. ಚಾಳುಕ್ಯ ವಿಕ್ರಮಾದಿತ್ಯನ ಮಗ ಮಲ್ಲಿ-ಕಾರ್ಜುನನು 'ಕುಮಾರವೃತ್ತಿ'ಯಿಂದ ಅಲಂದೆ ಸಾಸಿರ ನಾಡನ್ನಾಳುತ್ತಿದ್ದ ವಿವರ ದೊರಕುತ್ತದೆ. ವಿಕ್ರಮಾದಿತ್ಯನ ರಾಣಿಯರಲ್ಲಿ ಅನೇಕರು ಒಂದೊಂದು ಭಾಗದ ರಾಜ್ಯಾಧಿಕಾರವನ್ನು ನಿರ್ವಹಿಸುತ್ತಿದ್ದರು. ಧಿಗ್ಗಾವಿಗೆಯಲ್ಲಿ 'ಪಿರಿಯರಸಿ ಪಟ್ಟಮಹಾದೇವಿ' ಮಲೆಯಮತಿದೇವಿ, ಅಲಂದೆಯಲ್ಲಿ ಯುವರಾಜ ಮಲ್ಲಿಕಾರ್ಜುನನೊಡನೆ ರಾಣಿಚಂದಲದೇವಿ, 'ಮನ್ನೆದಡಿ ನಾಡಿ'ನಲ್ಲಿ ೨ನೆಯ ತ್ರಿಭುವನಮಲ್ಲನ ರಾಣಿ ವೈಳಾಲದೇವಿ, 'ಅರಲುಮುನ್ನೂರಿ'ನಲ್ಲಿ ಮಹಾರಾಣಿ ಜಾಕಲದೇವಿಯರು ಆಳುತ್ತಿದ್ದ ವಿಷಯವಿದೆ. ರಾಜ್ಯದಲ್ಲಿ ಧರ್ಮ, ನೀತಿಗಳು ನೆಲಸಿ ನಿಂತಿದ್ದವು. ಧರ್ಮ ಶಾಸನಗಳನ್ನು ಕಾಪಾಡಿಕೊಂಡು ಬಂದ ಮತ್ತೂರ ಶಾಸನದಲ್ಲಿ

ಊರೊಡೆಯುರಕ್ಕುಂ ಮನ್ನೆಯುರೂರಾಳ್ವರಸಕ್ಕುಂ, ನಾಡ ಕೊಣ್ಡೆಯುರಕ್ಕುಂ" ಎಂದು ಹೇಳಿರುವಲ್ಲಿ 'ಒಡೆಯ' 'ಅರಸು' 'ಕೊಣ್ಡೆ' 'ಮೇಲಾಳ್ಕೆ' ಎಂಬಿವು ಬೇರೆ ಬೇರೆ ಅಧಿಕಾರದ ಹುದ್ದೆಗಳಾಗಿದ್ದುದು ತಿಳಿದು ಬರುತ್ತದೆ. ಅಗ್ರಹಾರ, ಘಟಿಕಾಸ್ಥಾನ, ಗ್ರಾಮ, ಖೇಡ, ಪಟ್ಟಣ, ಇವು ರಾಜ್ಯದ ಮುಖ್ಯ ನೆಲೆಗಳಾಗಿದ್ದವು. ನಾಗಾಯಿ ಶಾಸನದಲ್ಲಿ ಚಾಳುಕ್ಯ ಮಂತ್ರಿಗಳ ಆಳಿಕೆಯ ರೀತಿಯನ್ನು ಬಣ್ಣಿಸುತ್ತ, 'ತಮ್ಮ ತಮ್ಮ ನಿಯಮಾಚರಣಗಳಂ ಬಿಸುಡದಂತಾಜ್ಞೆಯಿಂಕಾದು ಮೇದಿನಿಯಂ' ಎಂಬ ಮಾತು, ಹುಣಸೀ ಹಡಗಲಿಯ ಶಾಸನದಲ್ಲಿ ರಾಣಿ ಚಂದಲದೇವಿಯ ಆಳಿಕೆಯ ರೀತಿಯನ್ನು 'ದುಷ್ಟ ನಿಗ್ರಹ ಶಿಷ್ಟಪ್ರತಿಪಾಳನದಿಂದೊಲ್ದರಸುಗೆಯ್ಯುತ್ತಿರೊಲ್' ಎಂಬ ಹೇಳಿಕೆ- ಇವು ಇಲ್ಲಿನ ಸುಭದ್ರ ಆಡಳಿತದ ರೀತಿ ನೀತಿಯನ್ನು ಪ್ರತಿನಿಧಿಸುವ ರಾಜನೀತಿಯ ವಾಕ್ಯಗಳಾಗಿವೆ.

೫. ಧಾರ್ಮಿಕ ಸ್ಥಿತಿ-ಗತಿ

ಇಲ್ಲಿನ ಶಾಸನಗಳ ಸಮಾಲೋಚನೆಯಿಂದ ಅತಿ ಪ್ರಾಚೀನವಾದ ಬೌದ್ಧ, ಜೈನ, ವೈದಿಕ, ಶೈವ, ವೀರಶೈವ, ಹಾಗೂ ಕೆಲವು ಶಾಕ್ತ ಪಂಥಗಳು ಈ ಭಾಗದಲ್ಲಿ ಅಸ್ತಿತ್ವದಲ್ಲಿದ್ದುದಾಗಿ ಗೊತ್ತಾಗುತ್ತದೆ.

ಬೌದ್ಧ ಧರ್ಮ:

ಈ ಜಿಲ್ಲೆಯ ಸನ್ನತಿಯಲ್ಲಿ ದೊರಕುವ ಪ್ರಾಚೀನ ಪ್ರಾಕೃತ ಶಾಸನಗಳ ಬೆಳಕಿನಲ್ಲಿ (ಕ್ರಿ. ಶ. ಸು. ೨ ನೆಯ ಶತಮಾನ) ಬೌದ್ಧ ಧರ್ಮವು ಇಲ್ಲಿ ಅತ್ಯಂತ ಪ್ರಾಚೀನ ಧರ್ಮವಾಗಿ ಪ್ರಸಾರಗೊಂಡಿತ್ತೆಂದು ಹೇಳಬಹುದು. ಇಲ್ಲಿನ ಬೌದ್ಧಸೂಪ್ತ, ಸಂಘಾರಾಮಗಳಿಗೆ ರಾಜಕೀಯ ವ್ಯಕ್ತಿಗಳೂ ಅಲ್ಲದೆ, ಬೌದ್ಧಧರ್ಮದ, ಭಿಕ್ಷು, ಭಿಕ್ಷಣಿಯರು ಕೂಡಿ ಕೆಲವೊಂದು ದಾನವಿತ್ತ ಉಲ್ಲೇಖ ಶ್ವೇತ ಘನ ಶಿಲೆಯ ತುಣುಕುಗಲ್ಲುಗಳ ಮೇಲೆ ನಮಗೆ ದೊರೆಯುತ್ತದೆ. ಇವು ಗಳ ಲಿಪಿ ಬ್ರಾಹ್ಮೀ, ಭಾಷೆ ಪ್ರಾಕೃತ (ಇವನ್ನು ಸಂಸ್ಕೃತ ಅನುವಾದದೊಂದಿಗೆ ಇಲ್ಲಿ ಕೊಟ್ಟಿದೆ).

ನಾಗನಿಕಾ (ನಾಗನಿಕೆ)
ಅಮಜಿಯಖನಿಕಾ (ಅಮಾತ್ಯ ಯಕ್ಷಿಣಿ)
ಬಿಕುನಿಯಾ ಅಹಿಮರಿಕಾಯಾ (ಭಿಕ್ಷುಣಿ ಅಹಿಮರಿಕಾ)

ಅದೇ ರೀತಿ ಜೇವರಗಿಯಲ್ಲಿ ಎತ್ತಿನ ಗಾಡಿಯಲ್ಲಿ ಕುಳಿತು ರಾಜದಂಪತಿಗಳು ಧರ್ಮ ಪ್ರಸಾರಕ್ಕಾಗಿ ಹೊರಟ ಶಿಲಾವಿಗ್ರಹ ಒಂದು ದೊರೆತಿದೆ. ಇದರಿಂದ ಕ್ರಿ. ಶ. ೨–೩ ನೆಯ ಶತ ಮಾನದಲ್ಲಿ ಶಾತವಾಹನ ಅರಸರು ಈ ಭಾಗದಲ್ಲಿ ಬೌದ್ಧ ಧರ್ಮ ಪ್ರಸಾರಕ್ಕೆ ಕಾರಣರಾದರು. ಜೈನ ಧರ್ಮದ ಪ್ರಾಬಲ್ಯ ಹೆಚ್ಚಿದಂತೆ ಇದರ ನಾಮಶೇಷವಾಯಿತು.


ಜೈನಧರ್ಮ :

ರಾಷ್ಟ್ರಕೂಟರ ರಾಜಧಾನಿ ಮಳಖೇಡವು ಕರ್ನಾಟಕದ ಪ್ರಸಿದ್ಧ ಜೈನ ಆಚಾರ್ಯ ಹಾಗೂ ಕವಿಗಳ ನೆಲೆವೀಡಾಗಿದ್ದುದಕ್ಕೆ ಸಾಹಿತ್ಯಾಧಾರಗಳಿದ್ದರೂ ಶಾಸನಗಳು ಮೌನತಾಳಿವೆ. ಈ ದೆಸೆಯಲ್ಲಿ ಶಾಸನಗಳ ಸಂಶೋಧನೆ ಇನ್ನೂ ನಡೆಯಬೇಕಿದೆ. ಆದರೆ ಕಲಬುರಗಿ ಜಿಲ್ಹೆಯ ಬಂಕೂರು ಹುಣಸೀಹಡಲಿಗಳಲ್ಲಿ ಜೈನ ಬಸದಿಗಳು, ವಿಗ್ರಹಗಳು ನಮಗೆ ಸಾಕಷ್ಟು ಸಂಖ್ಯೆಯಲ್ಲಿ ಉಪಲಬ್ಧವಿರುವುದು ಈ ಧರ್ಮದ ಪ್ರಭಾವಕ್ಕೆ ಸಾಕ್ಷಿಯಾಗಿದೆ. ಚಾಳುಕ್ಯ ವಿಕ್ರಮಾದಿತ್ಯನ ಕಾಲದ ಕ್ರಿ. ಶ. ೧೧೨೪ ರ ಸೇಡಿಂಬ ಶಾಸನದಲ್ಲಿ ಅಲ್ಲಿನ ೩೦೦ ಮಹಾಜನಂಗಳು ಶಾಂತಿನಾಥ ತೀರ್ಥಂಕರನ ಸ್ಮಾರಕವಾಗಿ ಒಂದು ಬಸದಿಯನ್ನು ನಿರ್ಮಿಸಿ ಅದಕ್ಕೆ ಸುವರ್ಣಕಳಶಾರೋಹಣ ಮಾಡಿಸಿ ಬಸದಿಗೆ 'ಬ್ರಹ್ಮ ಜಿನಾಲಯ'ವೆಂದು ಹೆಸರಿಟ್ಟ ವಿಷಯವಿದೆ. ಅಲ್ಲಿನ ದತ್ತಿಯನ್ನು ಸ್ವೀಕರಿಸುವ ಜೈನ ಗುರುಯಾಪನೀಯ ಸಂಘದ ಮಡುವ ಗಣಕ್ಕೆ ಸೇರಿದ 'ಪ್ರಭಾಚರಣ ತ್ರೈವಿದ್ಯಭಟ್ಟಾರಕ' ಇವನನ್ನು 'ಸಮಸ್ತಶಾಸ್ತ್ರಾಮೃತಪಾರಾವಾರಪಾರಗಂ' 'ಜ್ಞಾನನಿಧಾನ ದೀಪವರ್ತಿಗಳ್' ಎಂದು ವಿಶೇಷಿಸಲಾಗಿದೆ. ಈ ಚೈತ್ಯಾಲಯದಲ್ಲಿ ಜೀವದಯಾಷ್ಟಮಿ, ನಂದೀಶ್ವರಾಷ್ಟಮಿ ಸಂಕ್ರಮಣ, ಗ್ರಹಣಪರ್ವದ ಮಹಾಪೂಜೆ, ಮತ್ತಿತರ ಉತ್ಸವಗಳು ನೆರವೇರುತ್ತಿದ್ದ ಪ್ರಸ್ತಾಪವಿದೆ. ಇದರಿಂದ ಸೇಡಿಂಬವು ಒಂದು ಜೈನಕೇಂದ್ರವಾಗಿತ್ತೆಂಬುದು ಸ್ಪಷ್ಟ.

ಅದೇ ರೀತಿ ಕ್ರಿ. ಶ. ೧೨೦೦ ರ ತೆಂಗಳಿ ಶಾಸನದಲ್ಲಿ ಯಾಪನೀಯ ಸಂಘದ ಮಡಿಯೂರ್ ಗಣದ 'ನಾಗವೀರ ಸಿದ್ಧಾಂತ ದೇವ', ಚಾಳುಕ್ಯ ೬ ನೆಯ ವಿಕ್ರಮಾದಿತ್ಯನ ಕಾಲದ ಆಡಿಕಿ ಶಾಸನದಲ್ಲಿ 'ಗುಣವೀರ ಸಿದ್ಧಾಂತದೇವ'ರ ಉಲ್ಲೇಖಗಳಿದ್ದು ಈ ಭಾಗದ ಜೈನಧರ್ಮ ಪ್ರಸಾರ ಕಾರ್ಯದಲ್ಲಿ ಯಾಪನೀಯ ಸಂಘವು ಹೆಚ್ಚು ಪ್ರಭಾವ ಬೀರಿದ್ದುದಾಗಿ ಗೊತ್ತಾಗುತ್ತದೆ. ಈ ಧರ್ಮವು ೧೧ ನೆಯ ಶತಮಾನದ ಅಂತ್ಯ ಕಾಲದ ವರೆಗೆ ಊರ್ಜಿತಾವಸ್ಥೆಯಲ್ಲಿದ್ದು ಕ್ರಮೇಣ ಇಳಿಮುಖವಾಯಿತು.

ವೈದಿಕ ಧರ್ಮ :

ಸನಾತನ ಧರ್ಮವೆನ್ನಿಸಿದ ವೈದಿಕ ಧರ್ಮಕ್ಕೂ ಈ ಜಿಲ್ಲೆ ಆಶ್ರಯತಾಣವಾಗಿತ್ತು. ಸೇಡಿಂಬ ಅಗ್ರಹಾರದ ವಿಪ್ರೋತ್ತಮರನ್ನು ಕುರಿತು "ಚವುಷಷ್ಟಿ ಕಳಾನ್ವಿತ ವಸುಮತೀ ಗೀರ್ವಾಣರುಂ, ಸಮಸ್ತ ವಿದ್ಯಾವಿಶೇಷಣರುಂ, ಶ್ರೀ ನಾರಾಯಣ ದೇವರ ಪಾದಪಂಕಜ ಭ್ರಮರರುಮಪ್ಪ ಶ್ರೀ ಮದಗ್ರಹಾರಂ ಸೇಡಿಂಬದ ಅಶೇಷ ಮಹಾಜನ.ಮುನೂ-ರ್ವ್ವರುಂ ಸ್ಥಿರಂಜೀಯಾತ್" ಎಂದು ವರ್ಣಿಸಲಾಗಿದೆ. ಮತ್ತೂರಿನ ಶಾಸನದಲ್ಲಿ ಚಾಳುಕ್ಯ ವಿಕ್ರಮಾದಿತ್ಯನ ಆಸ್ಥಾನ ಪಂಡಿತರಲ್ಲಿ ಕೀರ್ತಿವೆತ್ತ 'ವಿಜ್ಞಾನೇಶ್ವರ ಪಂಡಿತ'ನ ಉಲ್ಲೇಖವಿದೆ. ಇವನು ಯಾಜ್ಞವಲ್ಕ್ಯ ಸ್ಮೃತಿಗೆ 'ಮಿತಾಕ್ಷರೀ' ಎಂಬ ಹೆಸರಿನಲ್ಲಿ ವ್ಯಾಖ್ಯಾನ ರಚಿಸಿದ್ದು ಇದು ಇಂದಿಗೂ ಹಿಂದೂ ಧರ್ಮದ ಶ್ರೇಷ್ಠ ನ್ಯಾಯ ಶಾಸ್ತ್ರವೆನ್ನಿ



ಸನ್ನತಿಯಲ್ಲಿ ದೊರೆತ ಬೌದ್ಧ ಧರ್ಮದ ಶಿಲಾಸ್ತಂಭ ಶಾಸನ

(ಕ್ರಿ. ಶ. ೨ ನೆಯ ಶತಮಾನ)



ಎತ್ತಿನ ಗಾಡಿಯಲ್ಲಿ ಕುಳಿತು ಧರ್ಮಪ್ರಸಾರ ಕೈಕೊಂಡ ರಾಜದಂಪತಿಗಳು : ಶಾತವಾಹನರ ಕಾಲ (ಜೇವರಗಿಯಲ್ಲಿ ದೊರಕಿದುದು. ಕ್ರಿ. ಶ. ಸು. ೨ ನೆಯ ಶತಮಾನ)

ಸಿದೆ. ನಾಗಾವಿಯಂತೂ ವೈದಿಕ ಧರ್ಮಶಾಸ್ತ್ರಾಭ್ಯಾಸದ ಪ್ರಮುಖ ವಿದ್ಯಾಪೀಠವೇ ಆಗಿತ್ತು. ಇಲ್ಲಿ ೪೦೦ ಜನ, ದಿಗ್ಗಾವಿಗೆಯಲ್ಲಿ ೩೦೦, ಸೇಡಿಂಬದಲ್ಲಿ ೩೦೦, ಮಣೂರಿನಲ್ಲಿ ೩೩, ಮಂದನೂರಿನಲ್ಲಿ ೨೦೦ ಬ್ರಾಹ್ಮಣ ಪಂಡಿತರು ಇದ್ದುದು ಇಲ್ಲಿನ ಅಗ್ರಹಾರಗಳ ಮಹತ್ವ ಹಾಗೂ ವೈದಿಕಧರ್ಮದ ಪ್ರಾಶಸ್ತ್ಯಗಳನ್ನು ಎತ್ತಿತೋರಿಸುತ್ತದೆ. ನಿಂಬರಗಿಯ ಒಂದು ಶಾಸನದಲ್ಲಿ ವಿಪ್ರೋತ್ತಮರಾದ ಮೂವರು ಪಂಡಿತರ ಉಲ್ಲೇಖವಿದೆ. ಅದರಲ್ಲಿ ಕೇಶವದ್ವೇದಿ ಎಂಬವನ ಸಂತತಿಯ ವರ್ಣನೆ ಚತುರ್ವೇದಗಳಿಗೂ ಮಿಗಿಲೆಂಬಂತೆ ಬರುತ್ತದೆ.

ಸರಸಿಜ ಸಂಭವಂಗೆ ಪರಿಭಾವಿಸೆ ಮೂಱನೇ
ವೇದಮಲ್ಲಿ ವಿ
ಸ್ತರಿಸಿದ ಶಾಖೆಯೊಂದದಱೊಳಗಾಗಿರೆ
ನಾಲ್ಕೆನಿಪನ್ತೆ ನೋಡೆ ನಿಂ
ಬರಗೆಯ ಕೇಶವ ಪ್ರಭುವಿನಗ್ರಜರೊಪ್ಪುವ
ಮೂವರೊಬ್ಬ ಸುಂ
ದರಿ ಸುತೆಯುನ್ತು ನಾಲ್ಕು ಮೊದಲಿಂದೆಸೆದರ್ವ
ಸುಧಾತಳದೊಳ್

ಬ್ರಹ್ಮ ಸೃಷ್ಟಿಸಿದ ವೇದಗಳ ಸಂಖ್ಯೆ ಮೊದಲು ಮೂರೇ ಇದ್ದು, ಅವುಗಳಿಂದ ವಿಸ್ತರಿಸಿದ ಒಂದು ಶಾಖೆಯಿಂದ ನಾಲ್ಕನೇ ವೇದವಾಯಿತು. ಆದರೆ ಕೇಶವದ್ವೇದಿಗೆ ಹುಟ್ಟಿದ

ಮಕ್ಕಳು ನಾಲ್ವರು. ಇವರೇ ನಾಲ್ಕು ವೇದಗಳೆಂಬ ಕಲ್ಪನೆ ಇಲ್ಲಿ ಸೊಗಸಾಗಿದೆ.

ಶೈವ—ವೀರಶೈವಗಳು

ಬಾಣ ಮತೆತಸ ಅತ್ಯಂತ ಪ್ರಾಚೀನ ಕಾಲದಿಂದಲೂ ಶಿವಭಕ್ತಿಗೆ ತವರ್ಮನೆಯಾಗಿತ್ತು. ಆ ಮನೆತನದ ಭಕ್ತಶ್ರೇಷ್ಠ ಬಾಣನ ಅತ್ಯುಜ್ವಳ ಭಕ್ತಿಯ ವರ್ಣನೆ ಈ ಜಿಲ್ಹೆಯ ತೆಂಗಳಿ ಶಾಸನದಲ್ಲಿ ಬರುತ್ತದೆ. ಚಾಳುಕ್ಯರಸರ ಕಾಲದಲ್ಲಿ ತ್ರಿಭುವನ ಮಲ್ಲ ೬ನೆಯ ವಿಕ್ರಮಾದಿತ್ಯನ ಕಾಲಕ್ಕೆ (ಕ್ರಿ.ಶ. ೧೧೨೩) ಬಿಬ್ಬರಸ, ನೂರ್ಮಡಿ ತೈಲನ ಕಾಲಕ್ಕೆ (ಕ್ರಿ. ಶ. ೧೧೬೨) ನಾಚರಸ ದಂಡನಾಯಕರು ಬಾಣವಂಶ ದವರೆಂದು ಖ್ಯಾತರಾಗಿ ಗೊಂಕನಾಡಿನ ಅಧಿಪತಿಗಳಾಗಿ ದ್ದರೆಂದು ಮತ್ತೂರು,, ಹೊಡಲ ಮತ್ತು ತೆಂಗಳಿ ಶಾಸನ ಗಳು ಉಲ್ಲೇಖಿಸುತ್ತವೆ.

ಶೈವಧರ್ಮವು ವೀರಶೈವದ ಪ್ರಭಾವಕ್ಕೆ ಸಮೂಲಾಗ್ರ ವಾಗಿ ಅಳವಡುವದಕ್ಕಿಂತ ಪೂರ್ವದಲ್ಲಿ ಇಲ್ಲಿ ಕಾಳಾಮುಖ ಶೈವಶಾಖೆ ಹೆಚ್ಚು ಪ್ರತಿಷ್ಠಿತವಾಗಿತ್ತೆಂದು ಅನೇಕ ಶಾಸನ ಗಳಿಂದ ವಿದಿತವಾಗುತ್ತದೆ. ಚಾಳುಕ್ಯ ವಿಕ್ರಮಾದಿತ್ಯನ ಆಳಿಕೆಯ ಮಣೂರ ಶಾಸನದಲ್ಲಿ 'ಗಂಗರಾಸಿಜೀಯ'ನೆಂಬ ವನು ಐದು ಶಿವಾಲಯಗಳಳಿಯಲು ಧರ್ಮ ನಿಮಿತ್ತವಾಗಿ ಇರಿದುಕೊಂಡು ಸಾಯುವನು. ಗಂಗರಾಸಿಜೀಯರ ಧರ್ಮ

ನಿಷ್ಠೆಗೆ ಪ್ರತೀಕವಾಗಿ ಆದಿತ್ಯ ನಾಯಕನು ಹಾಗೂ ಮಣಿಯೂರು ಮೂವತ್ತೂರು ಮಹಾಜನಗಳು ನೆರೆದು ೩೨ ಮತ್ತರು ಭೂಮಿಯನ್ನು ದಾನವಾಗಿತ್ತು ಶಾಸನ ನಡೆಸುವರು. ಇದು ಆ ಕಾಲದಲ್ಲಿ ಶಿವಾಲಯಗಳ ಸಂರಕ್ಷಣೆಯ ಮಹತ್ವ ಹಾಗೂ ಅದು ಅಳಿದರೆ ಪ್ರಾಣವನ್ನೇ ಅರ್ಪಿಸಬೇಕೆಂಬ ಶಿವಾಗಮೋಕ್ತ ತತ್ವವನ್ನು ಜ್ವಲಂತವಾಗಿ ಪ್ರತಿನಿಧಿಸುತ್ತದೆ. ಈ ಜಿಲ್ಲೆಯ ಹಲವೊಂದು ಶಾಸನಗಳಲ್ಲಿ ಕಾಳಾಮುಖ ಆಚಾರ್ಯರ ಹೆಸರುಗಳು ಉಲ್ಲೇಖಗೊಂಡಿದ್ದು, ಅಲ್ಲಲ್ಲಿ ಪ್ರಭಾವಿತ ಶೈವಕೇಂದ್ರಗಳನ್ನು ಸ್ಥಾಪಿಸಿ, ವಿದ್ಯೆ, ತಪಸ್ಸು, ಯೋಗ ಹಾಗೂ ವಿವಿಧ ಸಾರ್ವಜನಿಕ ಪುಣ್ಯ ಸೇವಾಕಾರ್ಯಗಳಲ್ಲಿ ತೊಡಗಿದ್ದರೆಂದು ತಿಳಿದು ಬರುತ್ತದೆ. ಹಂದರಕಿ ಶಾಸನದಲ್ಲಿ (೧೧೧೮) ನೈಷ್ಠಿಕ ಮಠದಾಚಾರ್ಯರಾದ ಕಾಳಾಮುಖ ತಪೋಧನರಾದ ಅಘೋರಶಕ್ತಿ ಪಂಡಿತ ಕ್ರಿ.ಶ. ೧೧೨೨ರ ಎಳರಾಮಿ ಶಾಸನದ ಆದಿತ್ಯಸೂರ್ಯರಾಶಿ ಪಂಡಿತ, ಹೊಡಲ ಶಾಸನದ (ಕ್ರಿ. ಶ. ೧೧೨೩) ರಾಮನಾಥ ದೇವಸ್ಥಾನದಾಚಾರ್ಯ ರುದ್ರೇಶ್ವರ ಶಿವದೇವ, ಹಿರೇಮುದನೂರಿನ ಚಾಳುಕ್ಯ ವಿಕ್ರಮಾದಿತ್ಯನ ಆಳಿಕೆಯ ರಾಮೇಶ್ವರ ದೇವಾಲಯದ ಶಾಸನದಲ್ಲಿ ತರ್ಕ ವ್ಯಾಕರಣ, ಕಾವ್ಯ, ನಾಟಕ, ವೇದಾನ್ತ, ಸಿದ್ಧಾನ್ತ, ಸಕಳಕಳಾ ಸಂಪನ್ನರಪ್ಪ ಎಂದು ವರ್ಣಿತನಾದ ಆಕಾಶಪಂಡಿತದೇವ ಕ್ರಿ. ಶ. ೧೨೮೮ ಮತ್ತು ೧೨೮೯ ರಲ್ಲಿ

ಲಿಖಿತವಾದ ಭೀಮರಥೀ ತೀರದ ಅಭಿನವ ಕೈಲಾಸವೆಂದ ವರ್ಣಿತವಾದ ಚಿನಮಳ್ಳಿ ಶಾಸನದ ಅಭಿನವಮಲ್ಲಿಕಾರ್ಜುನ ದೇವರ ಸ್ಥಾನಿಕಾಚಾರ್ಯರಾದ ಶಿವದೇವಯ್ಯ ಹಾಗೂ ರಾಯರಾಜಗುರು ವೀರ ಕೇದಾರದೇವ ಮೊದಲಾದವರು ಶೈವಧರ್ಮದ ಕಟ್ಟುಗ್ರ ಮೂರ್ತಿಗಳಾಗಿ, ಪ್ರಭಾವ ಬೀರಿದ್ದು ಇಲ್ಲಿ ಸ್ಪಷ್ಟವಾಗುತ್ತದೆ.

ಬಸವ ಪೂರ್ವಯುಗದ ಹಲವಾರು ವೀರಶೈವ ಶರಣರ ಜನ್ಮಭೂಮಿಯೂ ಕಲಬುರ್ಗಿಯ ಜಿಲ್ಲೆಯೇ ಆಗಿರುವದು ಒಂದು ವಿಶೇಷ. ವಚನಕಾರರಲ್ಲಿ ಆದಿಯಾದ ಜೇಡರ ದಾಸಿಮಯ್ಯನ (ಕ್ರಿ. ಶ. ೧೦೪೦) ನೆಲೆವೀಡಾದ ಮುದನೂರಿನಲ್ಲಿ ಸುಮಾರು ೨೬ ಶಾಸನಗಳು ಉಪಲಬ್ಧವಿವೆ. ಚಾಳುಕ್ಯ, ಕಳಚೂರಿ, ಕಾಕತೀಯ ಅರಸರ ನಾಮೋಲ್ಲೇಖ ಹಾಗೂ ಅಲ್ಲಿನ ರಾಮೇಶ್ವರ ತೀರ್ಥದ ಪ್ರಸಿದ್ಧಿಯಿಂದ ಮುದನೂರು 'ದಕ್ಷಿಣ ವಾರಣಾಸಿ' ಎಂದು ಪ್ರಕೀರ್ತಿಗೊಳಗಾಗಿದೆ. 'ರಾಮೇಶ್ವರ' ಅಥವಾ ರಾಮನಾಥ ಎಂಬುದೇ ವಚನಕಾರ ದಾಸಿಮಯ್ಯನ ವಚನ ಮುದ್ರಿಕೆಯಾಗಿದೆ. ಚಾಳುಕ್ಯ ಚಕ್ರೇಶ್ವರ ಜಗದೇಕಮಲ್ಲನ ಕಾಲದ (ಕ್ರಿ. ಶ. ೧೧೪೮) ಈ ಜಿಲ್ಲೆಯ ಗೊಬ್ಬೂರಿನ ಕೊರವರ ಭಾವಿಯ ಥರಕ್ಕೆ ಜೋಡಿಸಿದ ಶಿಲಾಶಾಸನದಲ್ಲಿ ಈ ಜೇಡರ ದಾಸಿಮಯ್ಯನ ವಂಶ ಸಂಬಂಧಿಕರ ಹಾಗೂ ಆತನ ಶಿಷ್ಯ ಸಂತತಿಯ ಉಲ್ಲೇಖವಿದೆ. ಪಿರಿಯ ಗೊಬ್ಬೂರಶೇಷ ಮಹಾಜನಂಗಳ ಶ್ರೀ ಪಾದಪದ್ಮಾರಾಧಕರು ಶ್ರೀ ರಾಮೇಶ್ವರ ದೇವರ ಗಂಧ

ವಾರಣರ್ **ಜಾಡಕುಲತಿಲಕ ಜಾಡರ ದಾಸಿಮಯ್ಯ** ಪ್ರಿಯ ಪುತ್ರರುಮಪ್ಪ ಸಕಲ ಜಾಡ ಗೊತ್ತಳಿಗಳು; ಈ ಜಲಾಲೇಖ ವಚನಕಾರ ದಾಸಿಮಯ್ಯನ ಪ್ರಸಿದ್ಧಿಗೆ ನೆಟ್ಟ ಸ್ಮಾರಕ ವಿಜಯ ಸ್ಥಂಬವಾಗಿದೆ. ವೀರಶೈವ ಆಚಾರ್ಯ ಪಂಚಕರಲ್ಲಿ ಪ್ರಸಿದ್ಧನಾದ ರೇವಣಸಿದ್ದೇಶ್ವರ (ರೇಣುಕಾಚಾರ್ಯ?) ರ ಕೀರ್ತಿ ಪವಾಡಗಳನ್ನು ಬಣ್ಣಿಸುವ ಈ ಜಿಲ್ಲೆಯ ಶಿರಿವಾಳ ಶಾಸನ ಅತ್ಯಂತ ಮಹತ್ವದ್ದಾಗಿದೆ (ಕ್ರಿ. ಶ. ೧೧೮೭) ಇದರಲ್ಲಿ ಸಿವಸಿದ್ಧಚಕ್ರಿ ರೇವಣದೇವ, 'ಅರುವಿನ ತತುಕಾರಂ' 'ಸತ್ಯದೊಳತ್ಯಂತಪ್ರಸಿದ್ಧಂ' 'ಸರ್ವಜ್ಞಮೂರ್ತಿ' 'ಪ್ರತ್ಯಕ್ಷ ಲಿಂಗ' ಎಂಬೀ ಅಭಿಧಾನಗಳು ಇವರ ಪ್ರಖರ ವ್ಯಕ್ತಿತ್ವವನ್ನು ಹೊರಹೊಮ್ಮಿಸುತ್ತವೆ. ಅದೇ ರೀತಿ ಈ ಜಿಲ್ಲೆಯ ನೆಲ್ಲಿಗೆಯ ಶಾಂತಯ್ಯ ಅಲಂದೆಯ ಏಕಾಂತ ರಾಮಯ್ಯರು ಸಹ ಶಾಸನೋಕ್ತ ಶರಣರಾಗಿದ್ದಾರೆ. ಒಟ್ಟಿನಲ್ಲಿ ವಚನಗಳ ನಿರ್ಮಾಣ, ಕವಿತ ರಚನೆ, ಧರ್ಮಕ್ರಾಂತಿ, ಕಾಯಕ ಜೀವನ ಮೊದಲಾದ ಶರಣ ಧರ್ಮದ ಸಂಘಟನೆಗೆ ನೆಲ ಭದ್ರಬುನಾದಿ ಹಾಕಿದೆ.

ಕೆಲವು ಶಾಕ್ತ ಪಂಥಗಳು :

ಸನ್ನತಿಯಲ್ಲಿ ಈಗಿರುವ ಚಂದ್ರಲಾಂಬಾ ದೇವತೆ ಬಹುಶಃ ಬೌದ್ಧರ ತಾರಾಭಗವತಿಯಾಗಿದ್ದಿರಬೇಕೆಂದು ಕೆಲವು ಸಂಶೋಧಕರ ತರ್ಕ. ನಾಗಾಯಿಯಲ್ಲಿ ಎಲ್ಲಮ್ಮ ದೇವತೆಯ ಉಪಾಸನೆ ನಡೆಯುತ್ತಿದ್ದು ಇದಕ್ಕೂ ಸಹ ದತ್ತಿ

ಬಿಟ್ಟ ಉಲ್ಲೇಖ ಶಾಸನಗಳಲ್ಲಿದೆ. ಕ್ರಿ. ಶ. ೧೩೩೭ ರಲ್ಲಿ ಬಾಚಲೆರಾಣಿಯ ಎಂಬ ಮಹಾ ಪ್ರಧಾನನೊಬ್ಬ ಮಳಖೇಡ ದಲ್ಲಿ ಮೈಲಾರ ದೇವರಿಗೆ ಒಂದು ಮುಖಮಂಟಪವನ್ನು ಹಾಗೂ ಒಂದು 'ಕುದುರೆಯ ಮೇಲಾಯ'ವನ್ನು ಕಟ್ಟಿಸಿದ ವಿಷಯವಿದೆ. ಮೈಲಾರ ದೇವರಿಗೆ ಕುದುರೆ ಬಿಡುವ ಸಂಪ್ರ ದಾಯವೀಗಲೂ ಇದೆ. ಮೈಲಾರನು ಭೈರವ ವೇಷದ ಶಿವನೇ ಎಂಬ ಬಗೆಗೆ ಅನೇಕ ಆಧಾರಗಳಿವೆ. ಈ ಜಿಲ್ಲೆಯ ಶಿರಿವಾಳ, ಮರ್ತೂರ ಮತ್ತು ನಿಂಬರಗಿ ಶಾಸನಗಳಲ್ಲಿ ಸೂರ್ಯನಾರಾಯಣನ ಪ್ರತಿಷ್ಠೆ ಮಾಡಿದ ವಿಷಯವಿರುವದ ರಿಂದ ಸೂರ್ಯಾರಾಧನೆಯೂ ಸಹ ಶಾಕ್ತ ಪಂಥದಲ್ಲಿ ಬಹು ಕಾಲದಿಂದ ರೂಢಿಯಲ್ಲಿದ್ದಿರಬೇಕು.

೬. ಸಾಂಸ್ಕೃತಿಕ ಜೀವನ

ಘಟಿಕಾಸ್ಥಾನಗಳು ಮತ್ತು ಮಠಗಳು :

ಈ ಜಿಲ್ಲೆಯ ಸಾಂಸ್ಕೃತಿಕ ಅಧ್ಯಯನದಲ್ಲಿ ಮುಖ್ಯ ವಾಗಿ ಶೈಕ್ಷಣಿಕ ವಿಷಯವನ್ನು ಕುರಿತು ಸಮಾಲೋಚಿಸ ಲಾಗಿದೆ.

ಪ್ರಾಚೀನ ಕರ್ನಾಟಕದ ಶೈಕ್ಷಣಿಕ ಕೇಂದ್ರಗಳೆಂದರೆ ಅಗ್ರಹಾರಗಳು, ಬ್ರಹ್ಮಪುರಿಗಳು, ಘಟಿಕಾಸ್ಥಾನಗಳು, ಮಠ

ಗಳು ಹಾಗೂ ದೇವತಾ ಮಂದಿರಗಳು. ಘಟಿಕಾಸ್ಥಾನಕ್ಕೆ ಸಂಬಂಧಿಸಿದಂತೆ ಇಂದಿನ ಕಲಬುರಗಿ ಜಿಲ್ಹೆಯ ಚಿತ್ತಾಪೂರ ತಾಲೂಕಿನ ನಾಗಾಯಿ ಉಲ್ಲೇಖನೀಯವಾಗಿದೆ.

ನಾಗಾಯಿಯ ಮೂಲ ಹೆಸರು ನಾಗವಾವಿ. ಚತುರ್ವೇದ ಪಾರಾವಾರ ಪಾರುಗರಪ್ಪ ನಾಲ್ಕೂರ್ವ ವಿಪ್ರೋತ್ತಮರಿಂದ ಅಭಿನವ ಬ್ರಹ್ಮಲೋಕವೆಂಬಂತೆ ವಸುಮತೀತಳಕ್ಕೆ ತಲೆಯೆಂಬಂತೆ ಕುಂತಳ ಮಹೀತಳಕ್ಕೆ ಮುಖವೆಂಬಂತೆ ಎಡೆದೊರೆ ಮುನ್ನೂರು ಪ್ರದೇಶಕ್ಕೆ ತಿಳಕವೆಂಬಂತೆ ಮಹಾಗ್ರಹಾರ ನಾಗವಾವಿ ಇತ್ತೆಂಬುದಾಗಿ ಇಲ್ಲಿನ ಶಾಸನದಲ್ಲಿ ಬಣ್ಣಿಸಲಾಗಿದೆ.


ನಾಗಾಯಿಯು ಕಲ್ಯಾಣಿಯ ಚಾಳುಕ್ಯರ ಕಾಲದ ಪ್ರಸಿದ್ಧ ಅಗ್ರಹಾರವಾಗಿದ್ದು, ಒಂದನೆಯ ಸೋಮೇಶ್ವರನ ಕಾಲಕ್ಕೆ (೧೦೪೨–೧೦೬೮) ಇಲ್ಲಿ ಘಟಿಕಾಸ್ಥಾನ ಸ್ಥಾಪಿತವಾಯಿತು. ಇದನ್ನು ನಿರ್ಮಿಸಿದವನು ಮಧುವಪರಸ ದಂಡನಾಯಕ. ಲೋಕದಲ್ಲಿ ಅವನು ನಿರ್ಮಿಸಿದ ಉದ್ಯಾನ, ನೀಡಿದ ದಾನ, ಇಕ್ಕಿದ ಸತ್ರ, ರಚಿಸಿದ ದೇವಾಲಯ, ಇಟ್ಟ ಅರವಂಟಿಗೆಗಳಿಗೆ ಲೆಕ್ಕವಿರಲಿಲ್ಲವೆಂದು ಶಾಸನಕವಿ ಉದ್ಗಾರ ತೆಗೆದಿದ್ದಾನೆ. ಆ ಮಹಾಪುರುಷನೇ ಒಂದು ಸ್ಥಾನಿಕ ವಿದ್ಯಾಲಯ ಮಟ್ಟದ ವಿದ್ಯೆಗಾಗರವಾದ ಘಟಿಕಾಸ್ಥಾನವನ್ನು ನಿರ್ಮಿಸಿ ಸಾಂಸ್ಕೃತಿಕ ಇತಿಹಾಸದಲ್ಲಿ ತನ್ನ ಹೆಸರನ್ನು ಚಿರಸ್ಥಾಯಿಯಾಗಿಸಿಕೊಂಡಿದ್ದಾನೆ.

ಚಾಳುಕ್ಯ ಚಕ್ರೇಶ್ವರನಾದ ೧ನೆಯ ಸೋಮೇಶ್ವರ 'ಕುಂದೂರು ನಾಡಿ'ನ ಕೋಳೂರು 'ನೆಲವೀಡಿ'ನಲ್ಲಿದ್ದಾಗ ಅವನಿಂದ ತನಗೆ ಪರಮೇಶ್ವರ ದತ್ತಿಯಾಗಿ ದೊರಕಿದ ಭೂಮಿಯುನ್ನು ಅಲ್ಲಿನ ತ್ರೈಪುರುಷ ದೇವಾಲಯಕ್ಕೂ ಮತ್ತು ತಾನು ಸ್ಥಾಪಿಸಿದ ಘಟಿಕಾಸ್ಥಾನಕ್ಕೂ ಧಾರೆಯೆರೆಯುತ್ತಾನೆ.


ನಾಗಾಯಿಯ 'ಘಟಿಕಾಸ್ಥಾನ'ದಲ್ಲಿ ಪ್ರಾಚೀನ ಭಾರತೀಯ ಪ್ರೌಢ ವಿದ್ಯೆಯ ಮಹತ್ವದ ಶಾಖೆಗಳೆಲ್ಲವೂ ಬೋಧಿಸಲ್ಪಡುತ್ತಿದ್ದವು. ಅಲ್ಲಿನ ವಿವಿಧ ವಾಙ್ಮಯ ಶಾಖೆ, ಅವನ್ನು ಕಲಿಸುವ ಉಪಾಧ್ಯಾಯ ಮತ್ತು ಕಲಿಯುವ ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿತ್ತು. ಶಾಸನದಲ್ಲಿ ಹೇಳಿರುವ ಅಂಕಿ ಅಂಶಗಳನ್ನಿಲ್ಲಿ ಕೊಟ್ಟಿದೆ.

ಉಪಾಧ್ಯಾಯರು	ಸಂಖ್ಯೆ
೧) ಭಟ್ಟದರ್ಶನ, ನ್ಯಾಸ, ಪ್ರಭಾಕರ ವ್ಯಾಖ್ಯಾನ ವೇತೃಗಳು	೩
೨) ವೇದವನ್ನು ಓದಿಸುವವರು	೩
೩) ಗ್ರಂಥ ಭಂಡಾರಿಗಳು	೧

ವಿದ್ಯಾರ್ಥಿಗಳು	
೧) ವೇದಾಧ್ಯಯಿಗಳು	೨೦೦
೨) ಶಾಸ್ತ್ರಾಧ್ಯಯಿಗಳು	೫೦



ಕನ್ನಡಿಗರ ವೀರ ಪರಂಪರೆಯನ್ನು ಸ್ಮರಿಸುವ ವೀರಗಲ್ಲುಗಳು ಮತ್ತು ಶಾಸನಗಳು
(ಕಲಬುರ್ಗಿ ಮ್ಯೂಸಿಯಮ್‌ದ ಮುಂಭಾಗ)



ಚಾಳುಕ್ಯರ ಕಾಲದ ಸುಪ್ರಸಿದ್ಧ ಘಟಿಕಾಸ್ಥಾನ
ನಾಗಾಯಿ. (ತಾ. ಚಿತಾಪುರ, ಜಿ: ಕಲಬುರ್ಗಿ)

ಘಟಿಕಾಸ್ಥಾನಕ್ಕೆ ನೀಡಲಾದ ೧೦೦೦ ಮತ್ತರು ಭೂಮಿಯನ್ನು ಈ ಕೆಳಗಿನಂತೆ ಉಪಭೋಗಿಸಬೇಕೆಂದು ನಿರ್ದಿಷ್ಟಪಡಿಸಲಾಗಿತ್ತು.

ಒಟ್ಟು ದತ್ತಿಯು ಉಪಾರ್ಜನೆ

ಭೂಮಿ		ಉದ್ದೇಶ
೩೫ ಮತ್ತರು	...	ಭಟ್ಟದರ್ಶನ ವ್ಯಾಖ್ಯಾತೃಗೆ
೩೦ ಮತ್ತರು	...	ನ್ಯಾಸ ವ್ಯಾಖ್ಯಾತೃಗೆ
೪೫ ಮತ್ತರು	...	ಪ್ರಭಾಕರ ವ್ಯಾಖ್ಯಾತೃಗೆ
೩೦ ಮತ್ತರು	....	ಗ್ರಂಥ ಭಂಡಾರಿಗೆ
೩೦ ಮತ್ತರು	..	ಘಟಿಕಾ ಪ್ರಹಾರಿ

ಮೇಲಿನ ಪರಿಕ್ರಮದಲ್ಲಿ ಹಂಚಲಾದ ಈ ಭೂಮಿಯಲ್ಲಿ ಉಳಿದ ಭಾಗವನ್ನು ದೇವಸ್ಥಾನದ ಇತರ ಸೇವಿಕಾ ವೃತ್ತಿಗಳಿಗೂ ಜೀರ್ಣೋದ್ಧಾರಕ್ಕೂ ವಿನಿಯೋಗಿಸಲಾಗುತ್ತಿತ್ತು.

ನಾಗಾಯಿಯ ಘಟಿಕಾ ಸ್ಥಾನದಲ್ಲಿ ವೇದ, ಶಾಸ್ತ್ರ, ನ್ಯಾಸ, ಪ್ರಭಾಕರ ಮೊದಲಾದ ವಿದ್ಯೆಗಳನ್ನು ಹೇಳಿಕೊಡುವ ಉಪಾಧ್ಯಾಯರು ಅವನ್ನು ಆಸ್ಥೆಯಿಂದ ಕಲಿಯುವ ವಿದ್ಯಾರ್ಥಿಗಳು ಒಂದೆಡೆ ಕೂಡಿಯೇ ಇರುತ್ತಿದ್ದುದು ಪ್ರಾಚೀನ ಗುರುಕುಲದ ಭವ್ಯಸ್ಮರಣೆಗೆ ಒಂದು ಪ್ರತೀಕವಾಗುತ್ತದೆ. ಇಲ್ಲಿ ಅವರೆಲ್ಲರ ಉಚಿತ ಊಟ ವಸತಿಗಳ

ಸೌಲಭ್ಯವಿದ್ದುದಲ್ಲದೆ ಪ್ರತಿಯೊಂದು ಶಾಖೆಯ ವಿದ್ಯೆಯನ್ನು ಬೋಧಿಸುವ ಉಪಾಧ್ಯಾಯರುಗಳಿಗೆ ಸಂಭಾವನೆಯಾಗಿ ಭೂಮಿಯನ್ನು ಉಂಬಳಿ ಹಾಕಿ ಕೊಡಲಾಗಿತ್ತು. ಮಧು ಸೂದನ ದೇವಾಲಯದಲ್ಲಿ ಇವರೆಲ್ಲರಿಗೆ ಉಚಿತ ನಿವೇಶನ ಗಳಿದ್ದುದಾಗಿಯೂ ತಿಳಿದು ಬರುತ್ತದೆ. ಏಕದಂಡಿ, ತ್ರಿದಂಡಿ, ಸ್ನಾತಕ, ಬ್ರಹ್ಮಚಾರಿ, ಹಂಸ, ಪರಮಹಂಸ ಮತ್ತು ಅನುಷ್ಠಾನಿಗಳೆಂಬ ವರ್ಗಶ್ರೇಣಿಗಳು (Classes) ಇದ್ದು, ಈ ಎಲ್ಲ ವರ್ಗದವರಿಗೂ ಪ್ರತ್ಯೇಕ ಭವನಗಳನ್ನು ಒದಗಿಸ ಲಾಗಿತ್ತು. ಋಗ್, ಯಜುರ್, ಸಾಮ, ಅಥರ್ವಣ ಹಾಗೂ ಇನ್ನಿತರ ಶಾಖಾ ಸಹಸ್ರ ವೇದ, ವೇದಾಂಗವನ್ನು ಕಲಿಯಲು ವೇದ ಪಠನ ಮಠವೊಂದು ಪ್ರತ್ಯೇಕವಾಗಿತ್ತು. ಇಂದಿಗೂ ಅಲ್ಲಿ ೬೦ ಕಂಬದ ಮಂಟಪವಿರುವದನ್ನು ನಾವು ಕಾಣುತ್ತೇವೆ. ಇಷ್ಟೊಂದು ದೊಡ್ಡದಾದ ವಿದ್ಯಾಕೇಂದ್ರ ಬಹುಶಃ ಕರ್ನಾಟಕದಲ್ಲಿ ಆ ಕಾಲದಲ್ಲಿ ಬೇರಡೆಗೆ ಇದ್ದಿರಲಾರದು.

ಈ ಜಿಲ್ಹೆಯಲ್ಲಿ ಇನ್ನೊಂದು ಘಟಿಕಾಸ್ಥಾನವಿದ್ದ ಉಲ್ಲೇಖ ಹರಸೂರ ಶಾಸನದಲ್ಲಿ ದೊರೆಯುತ್ತದೆ. ಈ ಊರಿಗೆ ಶಾಲೆಯ ಸೀಮುಳವೆಂಬ ಹೆಸರಿತ್ತು. ಇದು ವಿಜಾಪುರ ಜಿಲ್ಹೆಯ (ಶಾಲೆ + ಪವಟ್ಟಿಗೆ) > ಸಾಲೊಟಗಿ ಹೆಸರಿಗೆ ಸಂಬಂಧ ಕಲ್ಪಿಸುತ್ತದೆ. ಕ್ರಿ. ಶ. ೧೧೭೨ ರ ರಾಯಮುರಾರಿ ಸೋಯಿದೇವನ ಆಳಿಕೆಯಲ್ಲಿ ಮಾಧವನೆಂಬ ನಾಯಕನು ಮಹಾಮಂಡಳೇಶ್ವರ ವೀರರಾಮದೇವ ಮತ್ತು ಗೊಂಕರಸರ ಸಮೇತ ಅಗ್ರಹಾರವೆನ್ನಿಸಿದ 'ಶಾಲೆಯ

ಸೀಮುಳ'ದ ಶ್ರೀ ಭೋಗೇಶ್ವರ ದೇವರಿಗೆ ದತ್ತಿ ಬಿಟ್ಟ ವಿಷಯು ಅಲ್ಲಿದೆ. ಆದರೆ ಅಲ್ಲಿನ ಶಿಕ್ಷಣ ವಿಧಾನದ ಬಗಗೆ ಹೆಚ್ಚೇನೂ ಸಂಗತಿಗಳು ತಿಳಿದು ಬರುವದಿಲ್ಲ. ನಾಗಾಯಿ ಘಟಿಕಾಸ್ಥಾನ ದಲ್ಲಿ ವೇದ, ವೇದಾಂಗ ವಿದ್ಯೆಗೆ ಹೆಚ್ಚು ಪ್ರಾಶಸ್ತ್ಯ ದೊರಕಿದ್ದರೆ ದೇಶಭಾಷಾ ವಾಙ್ಮಯು ಹಾಗೂ ಪ್ರಾಥಮಿಕ ಅಭ್ಯಾಸಕ್ಕೆ ದೊರೆತ ಮನ್ನಣೆ ಕುರಿತು 'ಅಬಿಲು ಮುನ್ನೂರ'ದ ಹಂದರಕಿ (ಪಂದಿರ್ಕೆ) ಶಾಸನದಲ್ಲಿ (ಕ್ರಿ. ಶ. ೧೧೧೧ಲ) ಕೆಲವೊಂದು ವಿಶೇಷ ಸಂಗತಿಗಳಿವೆ. ಲೋಕರಸಮಂತ್ರಿ ಅಲ್ಲಿನ ಲೋಕೇಶ್ವರದೇವಾಲಯುಕ್ಕೆ ಬಿಟ್ಟ ದತ್ತಿಯು ಉಪಭೋಗ ವನ್ನು ವರ್ಣಿಸುತ್ತ "ದೇವರಂಗ ಭೋಗಕ್ಕಂ ಪೂಜೆಗಂ ತಪೋಧನರಾಹಾರದಾನಕ್ಕಂ" ಎಂಬಿವಷ್ಟಕ್ಕಲ್ಲದೆಯೆ "ಕಂನಡವಕ್ಕರವೋದುವ ವಿದ್ಯಾರ್ಥಿ ಮಾಣಿಗಳಿಗೆ ವೋದಿಸುವ ಉಪಾಧ್ಯಾಯುರ್ಗಂ" ಎಂದಿರುವಲ್ಲಿ ಕನ್ನಡ ಭಾಷಾಭ್ಯಾಸಕ್ಕೆ ದೊರೆತ ಗೌರವ ಇಲ್ಲಿ ಪ್ರತ್ಯೇಕವಾಗಿ ಸೂಚಿತ ವಾಗಿದೆ. ಈ ಜಿಲ್ಹೆಯು ಮಾನ್ಯಖೇಟ (ಮಳಖೇಡ) ವೂ ಸಹ ಪ್ರಸಿದ್ಧ ವಿದ್ಯಾಕೇಂದ್ರವಾಗಿದ್ದುದಾಗಿ ತಿಳಿದು ಬರುತ್ತದೆ. ಅಗ್ರಹಾರ ಘಟಿಕಾಸ್ಥಾನ, ದೇವಸ್ಥಾನಗಳಲ್ಲದೆ ಮಠಗಳೂ ಕೂಡ ಅಂದು ಪ್ರತ್ಯೇಕ ವಿದ್ಯಾಕೇಂದ್ರಗಳಾಗಿದ್ದವು. (ಇವು ದೇವಸ್ಥಾನಕ್ಕೆ ಹೊಂದಿಕೊಂಡೇ ಇದ್ದುವೆಂದು ಕೆಲವು ವಿದ್ವಾಂಸರ ವಿಚಾರ.) ಚಾಳುಕ್ಯ ತ್ರಿಭುವನಮಲ್ಲ ವಿಕ್ರಮಾದಿತ್ಯನ ಕ್ರಿ. ಶ. ೧೧೦೭ ರ 'ದಿಗ್ಗಾವಿಗೆ' ಶಾಸನದಲ್ಲಿ ಮಲೆಯ ಮತಿದೇವಿಯು ಅಗ್ರಹಾರ

'ದಿಗ್ಘ್ಯವಿಗೆ'ಯನ್ನಾಳುತ್ತಿದ್ದಾಗ ಅವಳ ಸಾಮಂತರಲ್ಲಿ ಒಬ್ಬನಾದ ಮನ್ನೆಯರಸ ಲೋಕಭೂಪನು ಅಲ್ಲಿನ ಸೋಮೇಶ್ವರ ದೇವಸ್ಥಾನಕ್ಕೆ ದತ್ತಿ ಬಿಡುತ್ತಾನೆ. ಈ ದೇವಸ್ಥಾನದ ಪಶ್ಚಿಮಕ್ಕೆ ಒಂದು ಮಠವಿದ್ದು ಅದರ ಹೆಸರು "ಚಿಕ್ಕ ಸಂಜೆಮಠ" ವೆಂದು ಉಲ್ಲೇಖಗೊಂಡಿದೆ. ಹಂದರಕಿ ಶಾಸನದಲ್ಲಿ (ಕ್ರಿ. ಶ. ೧೧೧೮) 'ನೈಷ್ಠಿಕ ಮಠ'ದ ಉಲ್ಲೇಖವಿದ್ದು, "ಕಾಳಾಮುಖ ನೈಷ್ಠಿಕ ಮಠದಾಚಾರ್ಯಂ ನೈಷ್ಠಿಕ ತಪೋದನಲಾಗವೇಳ್ಕುಂ" ಮಠದಾಚಾರ್ಯರುಮಿನಿತುಮಂ ನಡೆಯಿಸುವರು. ಅಲಂದೆಯಲ್ಲಿ 'ಪಂಚಮಠ'ಗಳಿದ್ದ ಉಲ್ಲೇಖವಿದೆ (ಕ್ರಿ. ಶ. ೧೦೮೨) ಇದರಿಂದ ಮಠ ಮತ್ತು ಅವಕ್ಕೆ ಹೊಂದಿಕೊಂಡು ಮಂಟಪಗಳಿದ್ದು ಇಲ್ಲಿ ಅಧ್ಯಯನ ಅಧ್ಯಾಪನಗಳೆರಡೂ ನಡೆಯುತ್ತಿದ್ದುವೆನ್ನಬಹುದು.

ಜಿಲ್ಲೆಯ ಶಾಸನಗಳಲ್ಲಿ ಉಲ್ಲೇಖಗೊಂಡ ಹಲವಾರು ವಿದ್ವಾಂಸರ ಹೆಸರು ಮತ್ತು ಅವರಿಗಿದ್ದ ಉಪಾಧಿ (Title) ಗಳನ್ನಿಲ್ಲಿ ಕೊಟ್ಟಿದೆ.

ವಿಜ್ಞಾನೇಶ್ವರ ಭಟ್ಟಾರಕ	ವೈದಿಕ	ಮರ್ತೂರು ಶಾಸನ	ಕ್ರಿ. ಶ. ೧೧೨೨
ಪರಮಾರಾಧ್ಯ			
ದಾವಣ 'ಭಟ್ಟ'	,,	ದಿಗ್ಗಾವಿಕೆ ,,	,, ೧೧೦೭
ಜಗದ್ಗುರು ಕೇಶವ 'ದ್ವೇದಿ'	,,	ನಿಂಬರಗಿ ,,	,, ೧೧೨೪
ಧುವೇಶ್ವರ ಪಣ್ಡಿತ 'ವಾಗ್ವಧೂಪ್ರಿಯ'	,,	,, ,,	,, ೧೧೨೪
ಶ್ರೀಮದಾಚಾರ್ಯ ಅಘೋರಶಕ್ತಿ ಪಂಡಿತ	ಶೈವ	ಹಂದರಕಿ ,,	,, ೧೧೧೮
"ರಾಯರಾಜ ಗುರು" ವೀರ ಕೇದಾರದೇವ	,,	ಬೆನಮಳ್ಳಿ ,,	,, ೧೨೯೨
ಗಂಗರಾಸೀ 'ಜೀಯರು'	,,	ಮಣ್ಣೂರ ,,	,, ೧೦೭೬
ರುದ್ರೇಶ್ವರ ಶಿವದೇವ	,,	ಹೊಡಲ ,,	,, ೧೨೦೦

ಸೂರೇಶ್ವರ ಪಣ್ಡಿತದೇವ 'ವಾದಿದೇವ'	ವೈದಿಕ	ಅಲಂದೆ	,,	,,	೧೦೮೨
ಪ್ರಭಾಚಂದ್ರ 'ತ್ರೈವಿದ್ಯಭಟ್ಟಾರಕ' 'ಪರವಾದಿಗಜಮೃಗರಾಜ'	ಜೈನ	ಶೇಡಂ	,,	,,	೧೧೨೪
ನಾಗಾರ್ಜುನ ಪಂಡಿತ 'ವಾಗ್ವಧೂನಂದನ'	ಬ್ರಾ	ಇಂಗಳಗಿ ಶಾಸನದ ಕರ್ತೃ		,,	೧೦೯೪

ಇಂತಹ ಅಪೂರ್ವ ವಿದ್ವಾಂಸರು ಆಚಾರ್ಯ ಪುರುಷರು, ರಾಯರಾಜಗುರುಗಳು, ಕವಿಗಳು, ಅಗ್ರಹಾರ, ಘಟಿಕಾಸ್ಥಾನ ಮತ್ತು ಮಠಗಳಲ್ಲಿದ್ದುದರಿಂದಲೇ ಅಂದಿನ ಆಳರಸರು ಅವರನ್ನು ಗೌರವಿಸಿದರು. ಇವರಿದ್ದ ವಿದ್ಯಾಸಂಸ್ಥೆಗಳಿಗೆ ದತ್ತಿ ಬಿಟ್ಟರು. ವಿದ್ಯೆ, ಸಂಸ್ಕೃತಿ, ಆಚಾರ ವಿಚಾರಗಳು ಈ ನಾಡಿನಲ್ಲಿ ರೂಪುಗೊಳ್ಳಲು ಶ್ರಮಿಸಿದ ಇವರ ಸೇವೆ ಅಮೂಲ್ಯ

೭. ಶಾಸನಗಳಲ್ಲಿ ಸಾಹಿತ್ಯ ಮೌಲ್ಯ

ಸಾಹಿತ್ಯ ದೃಷ್ಟಿಯಿಂದಲೂ ಈ ಭಾಗದ ಶಾಸನಗಳ ಕೊಡುಗೆ ಅಪಾರ. ಶಾಸನ ಕರ್ತರಲ್ಲಿ ಕೆಲವರು ಸ್ವಯಂ ಕವಿಗಳೂ ಆಗಿದ್ದಾರೆ. ಇಂಗಳಗಿ ಶಾಸನದ ಕವಿ ನಾಗಾರ್ಜುನ ಪಂಡಿತ ಮೊದಲಾದವರನ್ನಿಲ್ಲಿ ಉಲ್ಲೇಖಿಸಬಹುದು.


ನಾಡಿನವರ್ಣನೆಗೆ ಸಂಬಂಧಿಸಿದಂತೆ 'ಅಲಂದೆ ಸಾಸಿರ' ವನ್ನು 'ನಾಡುಗಳರಸ' ಎಂದು ಅಪೂರ್ವವಾಗಿ ವಿಶೇಷಿಸುವ ನಿಂಬರಗಿ ಶಾಸನದ ಒಂದು ಕಂದ ಪದ್ಯ ಇಂತಿದೆ.

ತಿಳಿಗೊಳದಿಂ ತಾವರೆಯಿಂ
ದೆಳಮಾವಿಂ ಗಂಧಶಾಳಿಯಿಂ ವಿವಿಧ ಕುಂಜಾ
ವಳಿಯಿಂ ಗಿಳಿಯಿಂದಳಿಯಿಂ
ದಿಳೆಗೆಸೇವುದಲಂದೆನಾಡು ನಾಡುಗಳರಸ.

ಕಾದುವ ಕಲಿಗಳಿಗೆ ಮಸ್ತಕ ಶೂಲವಾದ ಸೇಡಿಂಬ ಕೋಟೆಯ ಅಭೇದ್ಯತೆಯನ್ನು ಶೇಡಂ ಶಾಸನವು ಹೀಗೆ ವರ್ಣಿಸುತ್ತದೆ.

ಅಂಬರಮಂ ಪಳಂಚಲೆಯುತಿರ್ದಪುದಿಕ್ಕಿದ
ಕೋಟೆನಾಗಲೋ
ಕಂಬರಮೆಯ್ದೆ ಮುಚ್ಚಿದುದಗಲ್ದಗಲುತ್ತದಿಶಾಧಿ
ಶಾನ್ತರಾ
ಳಂಬರನೆಯ್ದೆ ಪರ್ವಿದುದು ತೇಜದ ಸಾಜದ
ಗುರ್ಬಿನಲ್ಕೆ ಸೇ
ಡಿಂಬದೊಳೆತ್ತಿ ಕಾದುವದಟಂಗಿದು ಮಸ್ತಕ
ಶೂಲಮಲ್ಲವೇ ||


ಆ ಕೋಟೆಯ ಅಟ್ಟಳೆ ಪ್ರಾಕಾರ ಅಗಳುಗಳನ್ನು ವರ್ಣಿಸುವ ಮತ್ತೊಂದು ಪದ್ಯವೂ ಇಲ್ಲಿ ಅಷ್ಟೇ ಅದ್ಭುತ ಮತ್ತು ರಮ್ಯ ಕಲ್ಪನೆಗಳಿಂದ ಮೆರುಗು ಪಡೆದಿದೆ. ಕನ್ನಡಿಗರ 'ಕೋಟೆ', 'ಕೊಟೆಗಾಳಗ'ದ ಮೇಲೆ ಶೇಡಿಂಬದ ಶಾಸನ ಹೆಚ್ಚಿನ ಬೆಳಕು ಚೆಲ್ಲುತ್ತದೆ. ನಿಂಬರಗಿ ಶಾಸನಾರಂಭ ದಲ್ಲಿ ಚಾಳುಕ್ಯವಂಶ ಪ್ರತಾಪವರ್ಣನೆ ವಿರೋಚಿತವಾಗಿ ಬಂದಿದೆ. ಅದರಲ್ಲಿ ಭೂಲೋಕಮಲ್ಲ ಸೋಮೇಶ್ವರನ ವೀರಖಡ್ಗದ ಪ್ರಶಂಸೆ ಇದೆ. ಆ ಕಂದ ವೀರರಸದ ಉಕ್ಕಂದವೇ ಆಗಿದೆ.




ಕೋಟೆಯ ವರ್ಣನೆಗೆ ಪ್ರಸಿದ್ಧವಾದ ಸೇಡಿಂಬ (ಶೇಡಂ)ದ
ಶಾಸನ



ರಾಷ್ಟ್ರಕೂಟರ ರಾಜಧಾನಿ ಮಳಖೇಡ ಕೋಟೆಯ ಮಹಾದ್ವಾರ



ಸುಪ್ರಸಿದ್ಧ ಘಟಿಕಾಸ್ಥಾನ ನಾಗಾಯಿ



ಶಿಲಾಫಲಕದ ಮೇಲೆ ಬರೆಯುತ್ತ ನಿಂತ ಸ್ತ್ರೀ ವಿಗ್ರಹ
ಸೈಜ್: ೩' × ೧', ಕಲಬುರ್ಗಿ ಜಿಲ್ಲೆಯ ಚಿಂಚನಸೂರನ
ಮಹೇಶ್ವರ ದೇವಸ್ಥಾನದ ಪಶ್ಚಿಮ ಗೋಡೆಯ ಮೇಲಿದೆ.
(ಇದು ಬೀದರ ಜಿಲ್ಲೆಯ ಜಲಸಂಗವಿಯಲ್ಲಿ ದೊರಕಿದ
ಮಾದರಿಯ ಮತ್ತೊಂದು ವಿಗ್ರಹ)

ಅರಿನರಪಾಳರ ಬಿಸುನೆ
ತ್ತುರನೀಂಟುವ ನಿಮಿರ್ದಭುಜಭುಜಂಗಹಯುಜಹ್ವಂ
ಪರಿಭಾವಿಸುದಿದೆನಿಪುದು
ನಿರುತಂ ಭೂಲೋಕಮಲ್ಲದೇವನ ಖಡ್ಗಂ

ಕಳಚೂರಿ ರಾಮ ಮುರಾರಿ ಸೋಮಿದೇವನ ಕ್ರಿ. ಶ. ೧೧೭೨ರ ಹರಸೂರಿನ ಶಾಸನದಲ್ಲಿ ಬರುವ ಇಂಗಡಲಿನ ವರ್ಣನೆ ಮನೋಜ್ಞವಾಗಿದೆ.

ಶ್ರೀವಧುಗೆ ತವರುದಗ್ರ
ಶ್ರೀವಲ್ಲಭನಿಕ್ಕೆದಾಣ ದಿತಿಜಾ ವಿಜಯು |
ಶ್ರೀವಧುಗುಪಾಯುಮೆಂನೆವಾ
ಕ್ಕ್ರೀವಲ್ಲಭನಳವೆ ಪೊಗಳಲಿಂಗಡಲೊಳುಪಂ ||

'ಶ್ರೀ'ಕಾರವು ಇಲ್ಲಿ ಪ್ರತಿ ಚರಣಕ್ಕೂ ಪುನರಾವರ್ತನೆಗೊಳ್ಳುವಲ್ಲಿ ಲಯೋನ್ನತಿಯೊಡನೆ ಆಯಾ ಪದದ ಭಾವೋನ್ನತಿಗೂ ಎಡೆ ದೊರಕಿದೆ. ಅಗ್ರಹಾರದ ವರ್ಣನೆಗಳು ಈ ಸಾಹಿತ್ಯದ ಮತ್ತೊಂದು ಭಾಗ. ನಿದರ್ಶನಕ್ಕೆ ತ್ರಿಭುವನ ಮಲ್ಲ ವಿಕ್ರಮಾದಿತ್ಯನ ಕಾಲದ ಕ್ರಿ. ಶ. ೧೧೨೩ರ ಒಂದು ಶಾಸನದಲ್ಲಿ ಮಱತೂರಿನ ಅಗ್ಗಳಿಕೆಯುನ್ನು ಉಲ್ಲೇಖಿಸಬಹುದು.

ಆ ವಿಷಯಾಂತರಾಳಿದೊಳಿಗಾನತ
ಸಾಲಿವನಾಳಿಯಿಂಲಸ
ದ್ದೇವಗೃಹಾಳಿಯಿಂ ಸುಕಪಿಕಾಳಿಯಿನೊಪ್ಪುವ
ನಂದನಾಳಿಯಿಂ

ತೀವಿಸಮಸ್ತದಿಕುತಟದೊಳೊಪ್ಪುವ
ವಾಪಿತಟಾಕರಾಜಿಯಿಂ
ಭಾವಿಸಿನೋರ್ಪಡಿನ್ತು ಮಱಿತೂರಮರೇಂದ್ರ
ಪುರಕ್ಕಮಗ್ಗಳಂ |

ತೀರ್ಥ ಕ್ಷೇತ್ರ ಹಾಗೂ ದೇವಾಲಯಗಳ ವರ್ಣನೆ ಕೂಡ ಕೆಲವು ಶಾಸನಗಳಲ್ಲಿದೆ. ದೇವಗಿರಿ ಯಾದವ ರಾಮಚಂದ್ರನ ಆಳಿಕೆಯಲ್ಲಿ (ಕ್ರಿ. ಶ. ೧೨೯೨) ಸಾಮಂತಾಧಿಪನಾದ ವಿಜಯ ಪುರದ ಮಾಯಿದೇವರಾಣೆ ಈ ಕ್ಷೇತ್ರಕ್ಕೆ ಬಂದು ದಿವ್ಯ ಕಾಣಿಕೆಗಳನ್ನಿತ್ತ ವಿವರ ಜಿನಮಳ್ಳಿ ಶಾಸನದಲ್ಲಿ ವರ್ಣಿತ ವಾಗಿದೆ.

ವಚನ : "ಅತ್ತಿನೂರೆಂಬತ್ತರ ಬಱಿಯುಂಬಾಡ **ಪಶ್ಚಿ ಮಾಭಿಮುಖವಾಗಿ ಹರಿವ ದಿಬ್ಬ ತೀರ್ಥ ಶ್ರೀ ಭೀಮಾ ರಥೀ ದೇವಿಯ ತಟಾಕದಲ್ಲಿ** ರಾಯರಾಜ ಗುರು ವೀರ ಕೇದಾರ ದೇವನ ತಪೋ ಪ್ರಭಾವಕ್ಕೆ ಪ್ರಸನ್ನನಾಗಿ ಚಿಲ್ಲಮಳೆ ಅಭಿನವ **ಕೈಲಾಸವೆಂದು** ಶ್ರೀ ಮಲ್ಲಿಕಾರ್ಜುನ ಬಂದು ಉತ್ತರಾಭಿಮುಖವಾಗಿ ನೆಲಸಿದ."

ಹೆಚ್ಚಾಗಿ ಪೂರ್ವ ದಿಕ್ಕಿನತ್ತ ಹರಿಯುವ ನೀರು ಇಲ್ಲಿ ಪಶ್ಚಿಮಕ್ಕೆ ಹರಿಯುವುದು ಒಂದು ವೈಶಿಷ್ಟ್ಯ. ಆ ಕ್ಷೇತ್ರ ಅಪೂರ್ವವೆಂಬುದು ಇಲ್ಲಿನ ನಂಬುಗೆ.

ಚಾಳುಕ್ಯ ನೂರ್ಮಡಿ ತ್ರೈಲನ ಆಳಿಕೆಯ ಕ್ರಿ. ಶ. ೧೧೬೨ ರ ತೆಂಗಳಿ ಶಾಸನದಲ್ಲಿ ಬಾಣ ಮನೆತನದ ನಾಚಿರಾಜ ಚಮೂಪ ಒಂದು ಶಿವಾಲಯುವನ್ನು ಕಟ್ಟಿಸುತ್ತಾನೆ. ಅದರ ವರ್ಣನೆ ಇಲ್ಲಿದೆ.

ರಜತಾದ್ರಿವೆರಸು ಮನ್ಮಥ
ವಿಜಯಂ ತೆಂಗುಳಿಯೊಳಕ್ಕರಿಂ ನೆಲಸಿದವೊ |
ಲ್ಸುಜನ ನಿಧಾನಂ ವೃಷಭ
ಧ್ವಜವನಮನೆಸೆಯೆ ಕಟ್ಟಿದಂ ನಾಚರಸಂ ||

ಕಲಬುರ್ಗಿ ಬಿಸಿಲಿನ ನಾಡೆಂದು ಪ್ರಸಿದ್ಧವಾದರೂ ಇಲ್ಲಿನ ಭೂಮಿ ಫಲವತ್ತಾದುದು. ಶಾಸನಗಳು ಈ ಭಾಗದ ಗಂಧವತಿಯಾದ ಪೃಥ್ವಿಗೆ ಸೌಂದರ್ಯದ ಸ್ವರ್ಣಚೌಕಟ್ಟನ್ನು ನಿರ್ಮಿಸಿವೆ. ಶಾಸನ ಕವಿ ಇಲ್ಲಿನ ಹಸಿರು ನೆಲ, ಬತ್ತದ ಗದ್ದೆ, ಸುಗಂಧವಿಡಿದ ಪುಷ್ಪರಾಶಿಗಳಿಗಷ್ಟೇ ಮನಸೋಲದೆ ಒಕ್ಕಲಿಗರು ಬೆಳೆಯುವ ಅಮೂಲ್ಯ ಬೆಲೆಯುನ್ನು ಸಂಪಾದಿಸುವ ಬೆಳೆಗಳನ್ನು ವರ್ಣಿಸಿ ವ್ಯವಹಾರ ಚತುರನೆನಿಸಿದ್ದಾನೆ. ನಮ್ಮ ಶಿಷ್ಟ ವರ್ಗದ ಕವಿಗಳ ಮಾವು-ಮಲ್ಲಿಗೆಗಳ ವರ್ಣನೆ ಬೇಸರವಾದಾಗ ಇವನ್ನು ನಾವು ಓದಿ ನಿಜವಾದ ಮಣ್ಣಿನ ವಾಸನೆಯುನ್ನು ಪಡೆಯುಬಹುದು. ನಿಂಬರಗಿ ಊರಿನ ತೋಟಗಳ ವರ್ಣನೆಯಿದು.

ಜೀರಗೆ ಕರ್ಬು ಸಂಪಗೆ ತಳಿರ್ತೆಲೆವಳ್ಳಿ
ಕವುಂಗುತೆಂಗು ಪಂ
ಕೇರುಹವುಳ್ಳರಲ್ದ ಪೊಸ ಮಲ್ಲಿಗೆ ಹಾದರಿ
ಬಾಳೆ[ಲಿ] ಈಲಿ ಖ
ರ್ಜೂರವಳುಂಬವಪ್ಪರಿಸಿನಂಗಳ ತೋಂಟದಿ
ನೊಳ್ಪನಾಳ್ದು ವಿ
ಸ್ತಾರದಿನಿಂತು ನಿಂಬರಗೆ ದೇವಪುರಕ್ಕೆಣೆಯಾಗಿ
ತೋಱುಗುಂ.

ವ್ಯಕ್ತಿಯ ಗುಣಶೀಲ ಕಥನಕ್ಕೆ ಸಂಬಂಧಿಸಿದ ಕೆಲವು ಭಾವಚಿತ್ರಗಳನ್ನಿಲ್ಲಿ ಗುರುತಿಸಬಹುದು. ನಿಂಬರಗಿ ಶಾಸನದಲ್ಲಿ ಬಂದ ಚಾಳುಕ್ಯ ವಂಶ ಪ್ರಸಿದ್ಧ ಚಕ್ರವರ್ತಿ ವಿಕ್ರಮಾದಿತ್ಯನ ವೀರ ವ್ಯಕ್ತಿತ್ವದ ಬಣ್ಣನೆ.

ನಿಜ ಖಡ್ಗಂ ವೀರಲಕ್ಷ್ಮೀವನಲುಳಿತ
ಸದ್ದರ್ಪಣಂ ತೇಜವಾಶಾ
ಗಜ ಕುಂಭಾಳಂಕ್ರಿತಾಲೇಪಿತ ಸುರುಚಿರ
ಸಿಂಧೂರ ಉತ್ತುಂಗ ಕೀರ್ತ್ತಿ
ಧ್ವಜವಾಕಾಶಾಗ್ರಗಂಗಾಜಳಧವಳ ರುಚಿ
ಸ್ಪರ್ಧಿಯಾಯ್ತೆಂಬಿನಂ ವಿ
ಶ್ವಜಗದ್ವಿಖ್ಯಾತನಾದಂನೃಪಮುಖತಿಳಕಂ
ವೀರ ಪೆರ್ಮಾಡಿದೇವಂ ।

ಕಳಚುರಿ ನರೇಂದ್ರನಾದ ರಾಯಮುರಾರಿಯು ಯುದ್ಧದ ಕಹಳೆ ಮೊಳಗಿದರೆ ವೈರಿ ಪಡೆ ಹೇಗೆ ಧೃತಿಗುಂದಿ ಸೋಲನ್ನೊಪ್ಪುತ್ತಿದ್ದ ದೃಶ್ಯ ಹರಸೂರು ಶಾಸನದಲ್ಲಿ(ಕ್ರಿ.ಶ. ೧೧೭೨) ಚಿತ್ರಿತವಾಗಿದೆ.

ಬಲವದ್ರಾಯಮುರಾರಿ ಸೋಮನೃಪತಿಮ
ಪ್ರಸ್ಥಾನ ಭೇರೀರವಂ
ನೆಲನಾ ಕಂಪಿಸಲುಣ್ಮೆ ವೈರಿಗಳದಿದ್ರ್ಗಾಂಟ
ದರಣ್ಯಂಗಳಂ
ಕೆಲರಾಳ್ದರ್ಕೆಲರೋಡಿದರ್ಕೆಲರುಸಿ
ರ್ಬಿಟ್ಟರ್ಕೆಲರ್ತಗ್ಗಿದ
ರ್ಕೆಲರಾದರ್ಕೆಲರರ್ಗಿದರ್ಕೆಲ
ರಡಂಗಿದರ್ಕೆಲರ್ಮುಗ್ಗಿದರ್ ||

ರಾಜ್ಯದ ಆಡಳಿತಾಧಿಕಾರಿಗಳಾಗಿ ತಾವಿದ್ದ ಕಡೆಗಳಲ್ಲೆಲ್ಲ ದಾನ ಧರ್ಮ, ಪರೋಪಕಾರಗಳಿಂದ ಜನತೆಯ ಮನ್ನಣೆ ಪಡೆದ ಅದೆಷ್ಟೋ ಸಾಮಂತರ ಹೆಸರುಗಳು ಶಾಸನಗಳಲ್ಲಿ ಚಿರ ಸ್ಥಾಯಿಯಾಗಿ ಮೆರೆದಿವೆ. ಇವುಗಳಲ್ಲಿ ಲೋಕಭೂಪನ ವರ್ಣನೆ ಹೀಗಿದೆ.

ಅರ್ಥಮುದಾಗ್ರನಿಂದಪುದು ನಿಲ್ವೊಡೆ
ಕೀರ್ತಿಯುನಿಲ್ಕುಮೆಂದು ವಿ
ದ್ಯಾರ್ಥಿಗೆ ಶಿಷ್ಯ ಸಂತತಿಗೆ ಬಂಧು
ಜನಾಳಿಗೆ ಕೂರ್ತು ಕೊಟ್ಟ ಧ

ಪುರ್ಷಾರ್ಥದೊಳರ್ಥಮಂ ತವಿಸಿ ಕೀರ್ತಿಗೆ
ನೋಂತುದಱಿಂ ಪರೋಪಕಾ
ರಾರ್ಥಮಿಂದಂ ಶರೀರಮೆನಿಪುನ್ನತಿ
ಸಂದುದು ಲೋಕಭೂಪನೊಳ್ |
—ಹಂದರಕಿ ಶಾಸನ.

ಕಲಬುರಗಿ ಜಿಲ್ಹೆಯ ಶಾಸನಗಳು ಚಾರಿತ್ರಿಕ ವ್ಯಕ್ತಿಗಳ ಗುಣ ಪ್ರಶಂಸೆಯನ್ನು ಮಾಡುವುದಷ್ಟೇ ಅಲ್ಲದೆ ಅನೇಕ ಪುರಾಣೋಕ್ತ ವ್ಯಕ್ತಿಗಳ ಮೇಲ್ಮೆಯನ್ನು ಧಾರ್ಮಿಕ ಮಹಾ ಪುರುಷರ ಮಹೋನ್ನತಿಯನ್ನು ಪಂಡಿತರ ಪ್ರತಿಭೆಯನ್ನು ಸಹ ಕೊಂಡಾಡುತ್ತವೆ. ಬಾಣಾವಂಶ ಪ್ರಸಿದ್ಧನಾದ ಒಬ್ಬನು (ಕ್ರಿ. ಶ. ೧೧೬೨) ಜೀವಣಗಿಪುರದಲ್ಲಿ ನಂದೀ ವಿಗ್ರಹ ಹಾಗೂ ಸಹಸ್ರ ಶಿವಲಿಂಗಗಳನ್ನು ಪ್ರತಿಷ್ಠಾಪಿಸುವನು. ತನ್ನ ವಂಶವಲ್ಲರಿಯನ್ನು ಹೇಳುವಾಗ ಶಾಸನ ಕವಿ ಈ ಬಾಣಭಕ್ತನ ಮೇಲ್ಮೆಯನ್ನು ಕೊಂಡಾಡಿದ್ದಾನೆ.

ಆವನ ಬಾಗಿಲಂ ಸಲೆ ಜಗದ್ವರದಂ
ಪಡಿಹಾಱನಾಗಿ ತಾಂ
ಕಾವುತಮಿರ್ದ್ದನಾವನ ಪುರೋಪವನಾ
ನ್ತರದೊಳ್ನಿರಂತರಂ
ದೇವರದೇವನಿರ್ದ್ದನನುರಾಗದಿ
ನಾವನ ಯುದ್ಧಕಾಲದೊ
ಳ್ದಾವಜವೈರಿಮಿರ್ದನನುವರಕ್ಕೆ
ಸಹಾಯತೆಗೆಯ್ದನಾಜಿಯೊಳ್

ನಿಂಬರಗಿ ಶಾಸನದಲ್ಲಿ ಒಂದು ಪಂಡಿತ ಮನೆತನದ ವಂಶ ವೃಕ್ಷವಿವೆ. ಜಗದ್ಗುರು ಕೇಶವದ್ವೇದಿಯು ನಾಲ್ವರು ಪುತ್ರರನ್ನು ನಾಲ್ಕು ವೇದಗಳೆಂಬತೆ ಪರಿಭಾವಿಸಿ ವರ್ಣಿಸಿದ ರೀತಿ ಇಲ್ಲಿನ ಕಲ್ಪನಾಚಮತ್ಕೃತಿಗೂ ವರ್ಣನಾವೈಖರಿಗೂ ನಿದರ್ಶನವಾಗಿವೆ.

ಸರಸಿಜ ಸಂಭವಂಗೆ ಪರಿಭಾವಿಸೆ
ಮೂಱಿಯೆ ವೇದಮಲ್ಲಿ ವಿ-
ವಿಸ್ತರಿಸಿದ ಶಾಖೆಯೊಂದಱೊಳಗಾಗಿರೆ
ನಾಲ್ಕೆನಿಪನ್ತೆ ನೋಡೆನಿಂ
ಬರಗೆಯು ಕೇಶವ ಪ್ರಭುವಿನಗ್ರಜರೊಪ್ಪುವ
ಮೂವರೊಬ್ಬಸುಂ
ದರಿಸುತೆಯುನ್ತು ನಾಲ್ಕು ಮೊದಲಿಂದೆಸೆವರ್ವ
ಸುಧಾ ತಳಾಗ್ರದೊಳ್ ||

ಬ್ರಹ್ಮಸಂಜನಿತವಾದ ವೇದಗಳು ಮೊದಲಿಗೆ ಮೂರು. ಅವುಗಳಿಂದ ವಿಸ್ತರಿಸಿದ ಒಂದು ಶಾಖೆಯೇ ನಾಲ್ಕನೆಯ ವೇದವೆನಿಸಿತು. ಆದರೆ ಕೇಶವದ್ವೇದಿಗೆ ಹುಟ್ಟುತ್ತಲೇ ನಾಲ್ಕು ವೇದಗಳು ಎಂದರೆ ಅವನ ನಾಲ್ವರು ಮಕ್ಕಳು-ಮೂರು ಗಂಡು ಒಂದು ಹೆಣ್ಣು ಇಲ್ಲಿನ ಉತ್ಪ್ರೇಕ್ಷೆ. ಶಾಸನ ಕವಿಯ ಪ್ರತಿಭೆಗಿದು ನಿದರ್ಶನವಾಗಿದೆ.

ಶೈಲಿ : ಭಾಷೆ ಹಾಗೂ ಶೈಲಿಯ ಸೌಷ್ಟವತೆಯ ದೃಷ್ಟಿಯಿಂದ ಈ ಜಿಲ್ಲೆಯ ಜಿನಮಳ್ಳಿ, ನಿಂಬರಗಿ, ಹಂದರಕಿ,

ಮತ್ತೂರು, ತೆಂಗಳಿ ಹಾಗೂ ಹೊಡಲು ಮುಂತಾದ ಶಾಸನಗಳು ಪರಿಶೀಲನಾರ್ಹವಾಗಿವೆ. ಚಂಪೂ ಕಾವ್ಯ ಶೈಲಿಯ ಪ್ರೌಢಿಮೆ, ಗದ್ಯ-ಪದ್ಯಗಳ ಬಂಧುರತ್ವ ಹಾಗೂ ವಿವಿಧ ಛಂದೋ ಪ್ರಕಾರಗಳು ಈ ಶಾಸನಗಳಲ್ಲಿ ಯಥೇಷ್ಟವಾಗಿ ಕಾಣ ದೊರೆಯುತ್ತದೆ. ಸಂಸ್ಕೃತ ಭೂಯಿಷ್ಠವಾದ ದೀರ್ಘ ಸಮಾಸೋಕ್ತ ಶಾಸನ ಶೈಲಿಗೆ ಇದೊಂದು ವಾಕ್ಯ ನಿದರ್ಶನ.

"ಸ್ವಸ್ತ್ಯನೇಕ ಭಂಗುರ ತರಂಗ ಸಂಘಾತ ವೀಚಿ ಚ್ಛಾಯಲವಣಾಬ್ಧಿ ವಳಯವಳಯಿತ ವೇಳಾಪನ ಗಂಗಾತೀರ ವಾರಿಯಾತ್ರಾ ತನ್ಮಧ್ಯದೇಶಾಧೀಶ್ವರಂ," ಇದು ಚಾಳುಕ್ಯ ವಿಕ್ರಮಾದಿತ್ಯನ ಮಂತ್ರಿ ಹೈಹಯ ವಂಶದ ಬಿಜ್ಜರಸನನ್ನು ವರ್ಣಿಸುವ ಹುಂಡರಕಿ ಶಾಸನದ ಅಭಿದಾನಗಳ ಆನುಪೂರ್ವಿ ಭಾಗ. "ವಿಕ್ರಮಾಂಕನ ರತ್ನೋತ್ಕರ ನಿಚಿತ ಮಕುಟ ತಾಟಿತ ಚರಣ ವಿಜ್ಞಾನ ದೇವರೇಂ ಕೇವಳಿಮೋ," ಎಂಬಲ್ಲಿ ಪ್ರೌಢ ವಾಕ್ಯಸರಣಿಯನ್ನು ಗಮನಿಸಬೇಕು. (ಮತ್ತೂರು ಶಾಸನ) ಕಂದ ಪದ್ಯಗಳನ್ನು ದೇಶ-ಪುರ ವರ್ಣನೆಗೆ ಹೆಚ್ಚಾಗಿ ಬಳಸಿದ್ದರೆ, ವ್ಯಕ್ತಿ ಚಿತ್ರಗಳಿಗಾಗಿ ವೃತ್ತ ಪದ್ಯಗಳನ್ನಾಶ್ರಯಿಸಿದ್ದು ಶಾಸನ ಕವಿಗಳ ಒಂದು ರೀತಿಯಾಗಿದೆ. ಮರತೂರು ಶಾಸನದಲ್ಲಿ ವಿಜ್ಞಾನ ಭಟ್ಟಾರಕನ ಮಗ ಬೀಚಿರಾಜನ ಗುಣ ಪ್ರಶಂಸೆಗೆ ಸಂಬಂಧಿಸಿದ ಚಂಪಕಮಾಲಾವೃತ್ತವೊಂದರಲ್ಲಿ ಪ್ರತಿಚರಣಕ್ಕೂ ಅಳವಟ್ಟ ಆದಿಪ್ರಾಸ, ಒಳಪ್ರಾಸ ಹಾಗೂ ಅನುರಣಿತ ಧ್ವನಿಯ ಪೆಂಪು ಮನಂಬುಗುವಂತಿದೆ.

ಜಲಧಿಯ ಗುಂಪು ಮಂದರದ ಪೆಂಪು
ಧರಿತ್ರಿಯದಿಂಪು ಬೀಚಿಯೊಳ್
ಮಲಯಜದಪಂಪು ಮಲ್ಲಿಗೆಯ ಕಂಪು
ವಿನೋದದ ಸೊಂಪು ಚಾಗದು
ಬ್ಬಿಸುವಲಂಪು ತನ್ನ ಮನದೊಳ
ಗೆಡೆಗೊಂಡಿರೆ ಶಾಂತ ಚಿತ್ತದಿಂ
ಬಳೆದನುರಾಗಲತೆ ಪರ್ವಿದುದೀ
ಭುವನತ್ರಯಂಗಳಿಂ ||

ಬೀಚಿರಾಜನ 'ಅನುರಾಗವೆಂಬ ಲತೆ'ಗೆ ಇವೆಲ್ಲವೂ ಪರಿಪೋಷಕಗಳಾಗಿರುವದರಿಂದ ಈ ಶಾಸನ ಪದ್ಯ ಒಂದು ಸುಂದರ ಸಸ್ಯರೂಪಕವಾಗುತ್ತದೆ. ಶಾಸನಾರಂಭದಲ್ಲಿ ಆಯಾ ಇಷ್ಟ ದೇವತಾ ಸ್ತುತಿಯನ್ನು ಕೆಲವರು ಭಾವಪೂರ್ಣವಾಗಿ ತಂದಿದ್ದಾರೆ. ನಿದರ್ಶನಕ್ಕೆ ಮರತೂರು ಶಾಸನದ ಮಂಗಳ ಪದ್ಯ.

ಶ್ರೀಯಂ ಶ್ರೀ ಪದ್ಮನಾಭಂಗಖಿಳ ಭುವನ
ಜನಸ್ತುತ್ಯೆಯಾಗಿಪ್ಪ ವಾಣಿ
ಶ್ರೀಯಂ ಶ್ರೀಪದ್ಮನಾಭಂಗಮರ ಪರಿವೃಢ
ಶ್ರೀಯನಿಂದ್ರಗೆ ವೀರ
ಶ್ರೀಯಂ ಶ್ರೀನಂದಿಕೇಶಂ ಪ್ರಮಥ
ಸಮಿತಿಗೀಶಾಂಘ್ರಿ ಪಂಕೇಜ ಭಕ್ತಿ
ಶ್ರೀಯಂ ಮಾಹೇಶರ್ಗಿತ್ತನ್ನುಮನೆಸದಂ
ಶ್ರೀ ಪಾರ್ವತೀಶಂ ಮಹೇಶಂ ||

ಪದ್ಯ ಶೈಲಿಯಲ್ಲಿ ಮಾತ್ರವಲ್ಲದೆ ಗದ್ಯದಲ್ಲೂ ಕೂಡ ಈ ಭಾಗದ ಶಾಸನ ಕವಿಗಳು ವಿಶಿಷ್ಟ ಸಿದ್ಧಿಯನ್ನು ತೋರಿದ್ದಾರೆ.

'ವಾಗ್ವಧೂನಂದನ' ಬಿರುದಾಂಕಿತನಾದ ನಾಗಾರ್ಜುನ ಪಂಡಿತನೆಂಬ ಕವಿ ಈ ಜಿಲ್ಲೆಯ ಇಂಗಳಗಿ ಶಾಸನದ ಕರ್ತೃ. ಇದರಲ್ಲಿ ಒಟ್ಟು ೫೮ ಚರಣಗಳಿವೆ. ಆರಂಭದ ೯ ಪದ್ಯಗಳನ್ನು ಬಿಟ್ಟರೆ ಇಡೀ ಶಾಸನ ಗದ್ಯ ನಿಬಿಡವಾಗಿದೆ. ವಿಕ್ರಮಾದಿತ್ಯನ ಕಾಲದಲ್ಲಿ ಕ್ರಿ. ಶ. ೧೦೯೪ ರಲ್ಲಿ ಹುಟ್ಟಿದ ಈ ಶಾಸನ ಅಂದಿನ ಕನ್ನಡ ಚಂಪೂ ರೀತಿ ಹಾಗೂ ವರ್ಣನಪದ ಗದ್ಯಕ್ಕೆ ರನ್ನಗನ್ನಡಿಯೆನಿಸಿದೆ.

"ಸ್ವಸ್ತ್ಯನವರತ ಪರಮ ಕಲ್ಯಾಣಾಭ್ಯುದಯ ಸಹಸ್ರಫಲಭೋಗ ಭಾಮಿನಿ | ಸಕಳ ದೀನಾನಾಥ ಮನಃ ಸಂತರ್ಪಣೋದ್ಯೋಗಿನಿ | ಸಮಸ್ತಾಂತಃಪುರ ನಿತಂಬಿನೀ ಕದಂಬ ಚೂಡಾಮಣಿ | ಚತುರ್ವಿಧ ದಾನಚಿಂತಾಮಣಿ | ರಂಭಾವಿಳಾಸೋಪಹಸಿತಸಮ್ಮೂರ್ತಿ | ದಿಗ್ವಿಜಯ ವಿಳಸಿತೋಜ್ವಳ ಕೀರ್ತಿ | ಕಲಿಕಾಲ ಪಾರ್ವತಿ | ಅಭಿನವ ಸರಸ್ವತಿ | ಸಕಳ ಕಳಾಧಾರಿ | ಮೃಗ ಮೃದಾಮೋದೆ ಸಹಜಬೆಡಂಗಿ, | ಶ್ರೀಮತ್ ತ್ರಿಭುವನ ಮಲ್ಲದೇವ ವಿಶಾಳ ವಕ್ಷಃಸ್ಥಳ ನಿವಾಸಿನಿಯುರಪ್ಪ ಶ್ರೀ ಮಜ್ಜಾಕಳದೇವಿ"—

ಕಲಬುರಗಿ ಜಿಲ್ಲೆಯ ಇಂತಹ ಹತ್ತಾರು ಶಾಸನಗಳು ಸಾಹಿತ್ಯ ದೃಷ್ಟಿಯಿಂದ ಮಿಗಿಲೆನಿಸಿವೆ. ವಿವಿಧ ಛಂದಸ್ಸಿನ

ಪ್ರಯೋಗ, ವರ್ಣನೆ, ಅಲಂಕಾರ, ಧ್ವನಿ, ರಸ ಸಿದ್ಧಿಗಳಿಂದ ಕೂಡಿ, ಈ ನಾಡಿನ ಸಾಹಿತ್ಯ ಪರಂಪರೆಗೆ, ಭಾಷಾ ಸಮೃದ್ಧಿಗೆ ಭದ್ರ ನೆಲಗಟ್ಟನ್ನು ನಿರ್ಮಿಸಿವೆ. ಏನಿದ್ದರೂ ಶಿಲಾಶಾಸನಗಳ ಸಾಹಿತ್ಯ ಸಂಪತ್ತಿ ಆಯಾ ಕಾಲ, ಸನ್ನಿವೇಶ ಗಳಲ್ಲಿ ಹೊರಹೊಮ್ಮಿದೆ. ತ್ರಿಕಾಲ ಸತ್ಯವೆನ್ನಿಸುವ ಭಾವನೆ ಅಖಂಡ ಜೀವನ ದರ್ಶನ ಇಲ್ಲದ್ದರಿಂದ ಇವುಗಳ ಓದು ಸ್ವತಂತ್ರ ಕಾವ್ಯದಷ್ಟು ಪ್ರಯೋಜನಕಾರಿಯಾಗಲಾರದು. ಆದರೆ ಕವಿಗಳೇ ಶಾಸನಗಳನ್ನು ಬರೆದ ಸಂದರ್ಭದಲ್ಲಿ ಇವುಗಳ ಮಹತ್ವ ಗಮನಾರ್ಹವಾಗುತ್ತದೆ.

೮ ಭಾಷೆಯು ಸ್ವರೂಪ

ಶಾಸನಗಳು ಆಯಾ ಕಾಲದ ಬರವಣಿಗೆ, ಭಾಷೆಯ ಸ್ಥಿತಿ, ಅಂದಿನ ಉಚ್ಚಾರಣ ಪದ್ಧತಿ ಹಾಗೂ ಪ್ರಾಂತಭೇದ (Regional Dialect)ಗಳ ದೃಷ್ಟಿಯಿಂದಲೂ ಗಮನಾರ್ಹ ವಾಗಿವೆ. ಮುಖ್ಯವಾಗಿ ಈ ಜಿಲ್ಲೆಯ ಕೆಲವೊಂದು ಸ್ಥಳ ನಾಮ (Place Names)ಗಳಲ್ಲಿ ಅಂದಿನ ಮತ್ತು ಇಂದಿನ ರೂಪಾಂತರಗಳನ್ನಿಲ್ಲಿ ಗುರುತಿಸಲಾಗಿದೆ.

ಊರ ಹೆಸರು	ಶಾಸನಕಾಲ	ಹಳಗನ್ನಡ ವ್ಯಾಕರಣ ವೈಶಿಷ್ಟ್ಯ	ವರ್ತಮಾನ ಉಚ್ಚಾರಣಾ ರೂಪ
೧	೨	೩	೪
ಅಲನ್ದಾಪುರ/ಅಲನ್ದೆ	ಕ್ರಿ. ಶ. ೧೦೮೨	ಲಕಾರನಿಯುಕ್ತ ಅನುನಾಸಿಕತ್ವ	ಅಲಂದ>ಅಲದಿ>ಅಲ್ದಿ
ಅೞಿಲೂರು	ಕ್ರಿ. ಶ. ೧೦೫೮	ೞಕಾರ	ಅಲ್ಲೂರು,
ಮೞಿತೂರು	ಕ್ರಿ. ಶ. ೧೧೨೩	,,	ಮುರತೂರು> ಮುತ್ತೂರು.
ನಾಗವಾವಿ	ಕ್ರಿ. ಶ. ೧೦೫೮	ವಕಾರ	ನಾಗಾವಿ>ನಾಗಾಯಿ

೧	೨	೩	೪
ಕಲುಂಬರಗೆ	ಕ್ರಿ. ಶ. ೧೦೯೮	ನಿತ್ಯಬಿಂದು	ಕಲುಬರಗಿ > ಕಲಬುರಗಿ ಕಲಬುರ್ಗಿ/ಗುಲ್ಬರ್ಗ
ದೀಂಘಾರ್ವಿಗೆ/ದಿಗ್ಘುವಿಗೆ	ಕ್ರಿ. ಶ. ೧೦೨೯	ಇಗೆ ಪ್ರತ್ಯಯ	ದಿಗ್ಗಾವಿ > ದಿಗ್ಗಾಂವ
ಪಂದಿರ್ಕ್ಕೆ	ಕ್ರಿ. ಶ. ೧೧೧೮	ಪಕಾರ ಹಾಗೂ ಇಕೆ ಪ್ರತ್ಯಯ	ಹಂದಿರಕೆ > ಹಂದಿರ್ಕೆ > ಹಂದಿರ್ಕಿ
ಪಲ್ಲಕಱಿಂಟಗೆ	ಕ್ರಿ. ಶ. ೧೧೫೮	ಪಕಾರ	ಹಲ್ಲಕರಟಿ > ಹಲಕಟ್ಟಿ > ಹಳಕಟ್ಟಿ
ಪೊಡಲ	ಕ್ರಿ. ಶ. ೧೦೭೬	,,	ಹೊಡಲು

೧	೨	೩	೪
ಎಱಿರಾವು	ಕ್ರಿ. ಶ. ೧೧೨೨	ಱಿ ಪ್ರಯೋಗ	ಎಡ್ಡರಾವು > ಎಡ್ರಾವು
ತಿಳಕೊಡೆ	ಕ್ರಿ. ಶ. ೧೦೮೦	ಡಕಾರ	ತಿಳಗೊಳ > ತಿಳಗೂಳ
ಬೆಣ್ಣೆಯುದಣ್ಡೆ	ಕ್ರಿ. ಶ. ೧೦೫೮	ಅನುನಾಸಿಕಗಳ ಬಳಕೆ	ಬೆಣ್ಣೆತೊರೆ
ಸೇಡಿಂಬ	ಕ್ರಿ. ಶ. ೧೦೫೮	ಮಧ್ಯಸ್ವರಾಗಮ	ಶೇಡಂ > ಸೇಡಂ > ಸೇಡ್ಮ
ತರ್ದೇವಾಡಿ	ಕ್ರಿ. ಶ. ೧೨೮೮	ರೇಫೆ ಪ್ರಯೋಗ	ತದ್ದೇವಾಡಿ

೧	೨	೩	೪
ಚಿಲ್ಲವೆಂಳೆ	ಕ್ರಿ. ಶ. ೧೨೮೮	ಲಕಾರ	ಚಿನುವಂಳ್ಳಿ > ಚಿನ್ಮಳ್ಳಿ
ಮಾಡಿಹಾಳ	ಕ್ರಿ. ಶ. ೧೧೩೪	ಮಧ್ಯಸ್ವರಾಗಮ	ಮಾಡ್ಯಾಳ
ಮಣಿಯೂರು	ಕ್ರಿ. ಶ. ೧೦೭೬	ಮಧ್ಯಸ್ವರಾಗಮ	ಮಣೂರು
ಮಳೆಯ ಖೇಡ (ಸಂ ಮಾನ್ಯಖೇಟ)	ಕ್ರಿ. ಶ. ೧೩೩೭	ಲ > ಳಕಾರ	ಮಳಖೇಡ
ಸಿರಿಪೊಬಿಲ	ಕ್ರಿ. ಶ. ೧೩೩೭	ಆದಿಸ್ವರಾಗಮ	ಶಿರಿವಾಳ ≥ ಸಿರವಾಳ
ಎಳವೊಳ	ಕ್ರಿ. ಶ. ೧೧೨೨	ದೇಸೀಕಂಳ ಪ್ರಯೋಗ	ಎಳ್ವಾರ > ಯಾಳವಾರ

ಈ ಕೆಲವು ಶಾಸನೋಕ್ತ ಪ್ರಮಾಣಗಳಿಂದ ಹಳಗನ್ನಡದಿಂದ ನಡುಗನ್ನಡ ಹೇಗೆ ರೂಪುಗೊಂಡಿತೆಂಬುದು ಸ್ಪಷ್ಟವಾಗುತ್ತದೆ.

೯. ಜನಜೀವನ

ಶಾಸನಗಳು ಸಮಕಾಲೀನ ಜೀವನವನ್ನು ಚಿತ್ರಿಸುವಲ್ಲಿ ಪ್ರಮುಖ ಆಧಾರಗಳಾಗುತ್ತವೆ. ಜನತೆಯ ಜೀವನಕ್ರಮ, ವಾಣಿಜ್ಯ, ಕೃಷಿ ಮುಂತಾದ ಉದ್ಯೋಗಗಳು, ಆರ್ಥಿಕ ವ್ಯವಸ್ಥೆ, ಅವರ ಕಲಾಪ್ರೇಮ, ಆದರ್ಶಗಳು, ನಂಬುಗೆಗಳು, ಸಾಂಘಿಕ ಮನೋಭಾವ, ದೈವಭಕ್ತಿ, ದೇಶಪ್ರೇಮ ಈ ಮುಂತಾದ ವಿಚಾರಗಳ ಮೇಲೆ ಇಲ್ಲಿನ ಶಿಲಾಶಾಸನಗಳು ಬೆಳಕು ಚೆಲ್ಲುತ್ತವೆ.

ವಾಣಿಜ್ಯ ಕ್ಷೇತ್ರದಲ್ಲಿ ಸೆಟ್ಟಿ, ನಕರ, ದೇಸಿ, ಮುಮ್ಮುರಿ ದಂಡಗಳದು ಪ್ರಮುಖ ಪಾತ್ರವಿತ್ತು. ಇವರು ದೇವಸ್ಥಾನಕ್ಕೆ ದತ್ತಿಗಳನ್ನು ಬಿಡುವಲ್ಲಿ ಊರಿನ 'ಮಹಾಜನ'ರೊಡನೆ ತಾವೂ ಉದಾರವಾಗಿ ದಾನಗಳನ್ನು ಸಲ್ಲಿಸುತ್ತಿದ್ದರು. ಚಿನಮಳ್ಳಿ, ಹರಸೂರ, ನಾಗಾಯಿಯ ಶಾಸನಗಳಲ್ಲಿ ಈ ಸಂಘಗಳಿದ್ದ ಪ್ರಸ್ತಾಪವಿದೆ. ದೇವಾಲಯಗಳಿಗೆ ಎಲ್ಲ ಸಂಪನ್ಮೂಲ ಉದ್ಯೋಗಗಳಿಂದ ಸುಂಕವನ್ನು ಸ್ವೀಕರಿಸಲಾಗುತ್ತಿತ್ತು. ಹರಸೂರಿನ ಭೋಗೇಶ್ವರ ದೇವಾಲಯಕ್ಕೆ

'ಗಾಣದಲದ್ದಸೊಲಗೆಯೆಣ್ಣೆಹೊಂಗೆ ಮಾಱಿದಡೆಕೆಯ್ಯಲ್ಲಿ ಅಯ್ದಡಕೆ, ಹೇಱಿಗೆ ಇಪ್ಪತ್ತು ಎಲೆ, ಬತ್ತದಲಿ ಕೊಟ್ಟವರಲು ಒಮಾನಂ, ಕೊಣ್ಡವರಲು ಒಮಾನಂ ಮೇಣಸು ಜೀರಗೆಗೆ ಹೊಂಗೆ ಬೆಳೆಯ ಹಾಗ' ಈ ವಿಧವಾದ ಕಾಣಿಕೆಯನ್ನು ಸಲ್ಲಿಸಬೇಕಿತ್ತು, ಎಂದು ಶಾಸನ ತಿಳಿಸುತ್ತದೆ (ಕ್ರಿ. ಶ. ೧೧೭೨) ನೇಕಾರಿಕೆಯಲ್ಲಿ ಮುಖ್ಯವಾಗಿ ರೇಶ್ಮೆ ಬಟ್ಟೆಗಳ ತಯಾರಿಕೆ ಇಲ್ಲಿ ಮುಖ್ಯ ಉದ್ಯೋಗವೆಂದು ಹೇಳಬಹುದು. ಜಿನ ಮಳ್ಳಿಯ ಮಲ್ಲಿಕಾರ್ಜುನ ದೇವರಿಗೆ ಬಿಟ್ಟ ದತ್ತಿಯಲ್ಲಿ ೧೦೦೦, ಗೋವುಗಳಲ್ಲದೆ ೯೬೦ 'ದೇವಾಂಗೆ ಪಟ್ಟೆ' (ರೇಶ್ಮೆ ಬಟ್ಟೆ) ಗಳನ್ನು ಕೊಟ್ಟ ವಿಷಯವಿದೆ. ಇದರಿಂದ ಇವನ್ನು ಅಧಿಕ ಸಂಖ್ಯೆಯಲ್ಲಿ ಉತ್ಪಾದಿಸಲಾಗುತ್ತಿತ್ತು ಎನ್ನಬಹುದು. ದೇವಸ್ಥಾನಗಳಲ್ಲಿ ಅನೇಕರಿಗೆ ಉದ್ಯೋಗಾವಕಾಶವಿತ್ತು. ಪುರಾಣ ಓದುವ ಪುರಾಣಭಟ್ಟ, ಜೀರ್ಣೋದ್ಧಾರದ 'ಕಲುಕುಟಿಗೆವೋಜ', ದೇವರ ಘಟಿಗೆಯ ಮಾಣಿ, ದೇವರನ್ನು ಪೂಜಿಸುವ 'ದೇಹಾರಿ', ನೈವೇದ್ಯ ಹಿಡಿವ 'ಬಾಣಸಿಗ', ದೇವಸ್ಥಾನವನ್ನು ಕಾಯುವ ಕಾಪಿನ ಭಟ್ಟ, ತ್ರಿಕಾಲ ಭೋಗದ 'ಪಾಳವಿಗರು', 'ಮದ್ದಳೆಕಾಱರು' ಹಾಡುವವರು 'ಪಾತ್ರದವರು', 'ಕಂಬದ ಸೂಳೆಯರು', 'ಸುನ್ನವೆಸದ', 'ಮಾಲೆಗಾಱ' ಇವರೆಲ್ಲರಿಗೂ ಒಂದೊಂದು ದತ್ತಿ ಬಿಟ್ಟ ವಿಷಯ ನಾಗಾಯಿ ಶಾಸನದಲ್ಲಿದೆ.

ಕೃಷಿ ನಮ್ಮ ಜನತೆಯ ಅತಿ ಮುಖ್ಯ ಉದ್ಯೋಗವಾಗಿತ್ತು. ಇವರನ್ನು 'ಒಕ್ಕಲಿಗ' ಅಥವ 'ತಳದೊಕ್ಕಲು'

ಎಂದು ನಾಗಾಯಿ ಶಾಸನದಲ್ಲಿ ನಿರ್ದೇಶಿಸಿದೆ. ಭೂಮಿಯ ಮೇರೆಗಳನ್ನು 'ಅಷ್ಟಬಂಧ'ದ ಕಲ್ಲುಗಳಿಂದ ನಿರ್ದಿಷ್ಟ ಪಡಿಸಲಾಗುತ್ತಿತ್ತು. ಭೂಮಿಯನ್ನು ಅಳೆಯುವಾಗ ಆಯಾ ಆಳರಸರ ಹೆಸರಿನ 'ಕೋಲು' ಅಥವ ಕಮ್ಮಗಳಿರು ತ್ತಿದ್ದವು. 'ವೀರವೆಡಂಗನ ಕೋಲುಮತ್ತರು' ಎಂಬ ಉಲ್ಲೇಖ ತೆಂಗಳಿ ಶಾಸನದಲ್ಲಿದೆ. (ಕ್ರಿ. ಶ. ೧೧೬೨) ಹುಣಸೀ ಹಡಗಲಿ ಶಾಸನದಲ್ಲಿ 'ನುಡಿದಂತೆಗಣ್ಡನಕೋಲಿ' ನಿಂದ ಕರಿಯ ನೆಲ ೧೨ ಮತ್ತರನ್ನುದತ್ತಿ ನೀಡಿದ ವಿಷಯ ವಿದೆ. ಗರ್ದೆ, (ನಾಗಾಯಿ ಶಾಸನ) 'ನೀರ್ನೆಲ' (ಹಂದರಕಿ ಶಾಸನ) ಎಂದರೆ ನೀರಾವರೀ ಬೇಸಾಯ ಹಾಗೂ ಒಣ ಬೇಸಾಯಗಳೆರಡೂ ಮುಖ್ಯವಾಗಿದ್ದವು. ಗದ್ದೆಯಲ್ಲಿ ಭತ್ತ ಅಥವ 'ರಾಜಾನ್ನ' ಮುಖ್ಯ ಬೆಳೆಯಾಗಿದ್ದಿತು. 'ಬಾಚಲ ದೇವಿರಾಣಿ' ಎಂಟು ಮತ್ತರ ಭೂಮಿಯನ್ನು 'ರಾಜಾನ್ನಂ' ಬೆಳೆವುದೆಂದತ್ಯಾನಂದದಿಂ' ಆನೆಮೇಶ್ವರ ದೇವರಿಗೆ ಬಿಟ್ಟುದಾಗಿ ಹಂದರಕಿ ಶಾಸನದಲ್ಲಿ ಹೇಳಿದೆ. ನಿಂಬರಗಿ ಶಾಸನದಲ್ಲಿ (ಕ್ರಿ. ಶ. ೧೧೩೪) ಕುಂತಳನಾಡಿನ ಅಲಂದೆ ಸಾಸಿರದ ಹಿರಿಮೆಯನ್ನು ವರ್ಣಿಸುತ್ತ ಇಲ್ಲಿನ ಫಲವತ್ತಾದ ಭೂಮಿಯಲ್ಲಿ ಎಲ್ಲ ಕಾಲದಲ್ಲೂ ಹಸಿರು ಕಂಗೊಳಿಸುತ್ತಿ ತ್ತೆಂದೂ, ಸಂಪಿಗೆ, ಎಲೆವಳ್ಳಿ, ಕವುಂಗು, ತೆಂಗು, ಬಾಳೆ, ಈಳೆ, ಕಜ್ಜೂರ, ಅರಿಸಿನ ಮುಂತಾದ ರೊಕ್ಕದ ಬೆಳೆ ಗಳನ್ನು ಬೆಳೆಯಲಾಗುತ್ತಿತ್ತೆಂದೂ ವರ್ಣಿಸಲಾಗಿದೆ. ಈ ಭಾಗದ ಭೂಮಿಯ ನೈಸರ್ಗಿಕ ಮೇರೆಗಳಲ್ಲಿ 'ಬೆಣ್ಣೆಯ

ತೊರೆ'ಯೂ ಒಂದು. (ಹರಸೂರ ಶಾಸನ ಕ್ರಿ. ಶ. ೧೧೦೨) ಇಲ್ಲಿನ ಭೂಮಿ ಬೆಣ್ಣೆಯಂತೇ ಮಿದುವಾದುದಕ್ಕೆ ಈ ಹೆಸರು ಅನ್ವರ್ಥಕ.

ಸಾಮಾಜಿಕ ವ್ಯವಸ್ಥೆಯಲ್ಲಿ ಬ್ರಾಹ್ಮಣರು ಶ್ರೇಷ್ಠವರ್ಗದವರಾಗಿದ್ದರು. ಉಳಿದ ಜಾತಿಗಳಲ್ಲಿ ಉಪವರ್ಣಗಳಾದ 'ಹದಿನೆಂಟು ಸಂತತಿ' (ಜಿನಮಳ್ಳಿ ಶಾಸನ ಕ್ರಿ. ಶ. ೧೨೯೨) ಗಳ ಉಲ್ಲೇಖವಿದೆ. ಒಕ್ಕಲಿಗ, ತಂಬುಲಿಗ, ಸೆಟ್ಟಿ, ಅಸಗ, ಗೊಂಡಾರ (ನಿಂಬರಗಿ ೧೧೩೭) ಕಂಚಗಾಱ, ಗೊಱವ, (ತೆಂಗಳಿ ೧೧೬೨) ಮೊದಲಾದವರು ಒಂದೊಂದು ಕುಲ ಕಸುಬಿನ ವಕ್ತಿಗಳಾಗಿದ್ದರು.

ಜನತೆಯಲ್ಲಿ ದೈವಭಕ್ತಿ ಹಾಗೂ ಕೆಲವೊಂದು ನಂಬಿಕೆಗಳು ನೆಲಸಿದ್ದವು. ಏವೂರಿನ ಶಾಸನದಲ್ಲಿ (ಕ್ರಿ. ಶ. ೧೦೭೧) ರವಿ ಚಮೂಪತಿ ಕಟ್ಟಿಸಿದ ಸ್ವಯಂಭೂ ದೇವಾಲಯಕ್ಕೆ ಹಾವು, ಚೇಳು ಕಡಿದವರು ಅಗ್ನಿಬಾಧೆಗೊಳಗಾದವರು. ಜ್ವರ ಬಾಧೆ ಹಾಗೂ ಇನ್ನಿತರ ಶರೀರ ಸ್ವಾಸ್ಥ್ಯವಿಲ್ಲದ ಜನ ಬಂದು ದೇವಾಲಯ ಪ್ರದಕ್ಷಿಣೆ ಮಾಡಿದರೆ ರೋಗ ನಿವಾರಣೆಯಾಗುವದೆಂಬ ನಂಬಿಕೆ (Belief) ಯನ್ನು ಕುರಿತು ವರ್ಣಿಸಲಾಗಿದೆ, ದೈವಭಕ್ತಿ ಇದರಿಂದ ಜನತೆಯಲ್ಲಿ ಗಾಢವಾಗಿ ಬೇರೂರಿದ್ದಿತ್ತೆಂದು ಸ್ಪಷ್ಟವಾಗುತ್ತದೆ. ದೇವಾಲಯ ಅಳಿದಾಗ ತಾನೂ ಕೂಡ ಇರಿದುಕೊಂಡು ಆತ್ಮಾಹುತಿಗೀಡಾದ

ದೈವೀ ಆತ್ಮಬಲಿ (Religious Suicide)ಯ ಪದ್ಧತಿಯೂ ಇಲ್ಲಿ ಪ್ರಚಲಿತವಿದ್ದ ವಿಷಯ ಮಣೂರಿನ ಶಾಸನ (ಕ್ರಿ. ಶ. ೧೧೭೬) ದಲ್ಲಿ ಬಂದಿದೆ. **ಪಶ್ಚಿಮಾಭಿಮುಖವಾಗಿ ಭೀಮಾ ನದಿ ಹರಿಯುವ** ಚಿಲ್ಲಮೆಳೆ (ಚಿನ್ಮಳ್ಳಿ) ಒಂದು ಪವಿತ್ರ ತೀರ್ಥ ವೆಂಬ ಭಾವನೆ ಜನತೆಯಲ್ಲಿ ಬೇರೂರಿತ್ತು. (ಚಿನ್ಮಳ್ಳಿಶಾಸನ ಕ್ರಿ. ಶ. ೧೨೮೮) 'ಚೈತ್ರೋತ್ಸವ', (ಹರಸೂರ ೧೧೭೨) 'ನಂದೀಶ್ವರಾಷ್ಟಮಿ', (ಶೇಡಂ) ಮೊದಲಾದ ಧಾರ್ಮಿಕ ಉತ್ಸವಗಳನ್ನು ದೇವಾಲಯಗಳಲ್ಲಿ ಆಚರಿಸಲಾಗುತ್ತಿತ್ತು. ಒಂದೊಂದು ಕೇರಿಯಲ್ಲಿ ಒಂದೊಂದು ಕುಲ ಕಸಬಿನ ಪ್ರಜೆ ಗಳಿರುತ್ತಿದ್ದ ವಿಷಯ ನಿಂಬರಗಿ ಶಾಸನ (ಕ್ರಿ. ಶ. ೧೧೭೪) ದಿಂದ ತಿಳಿದು ಬರುತ್ತದೆ. ದೇವಸ್ಥಾನದಲ್ಲಿ ಗೀತ, ವಾದ್ಯ, ನೃತ್ಯ, ಖಂಡಿಕ ಪುರಾಣ ಶ್ರವಣಗಳು ನಡೆಯುತ್ತಿದ್ದು, ಇವು ಜನತೆಯ ಕಲಾಭಿರುಚಿಗಳೂ ಆಗಿದ್ದವು. ಕನ್ನಡ ಕಾವ್ಯ ಗಳಲ್ಲಿ ಸುಂದರ ಸ್ತ್ರೀಯರು ಅರವಟ್ಟಿಗೆಯಲ್ಲಿ ನೀರೆರೆಯುವ ವರ್ಣನೆ ಬರುತ್ತದೆ. ಆದರೆ ಅಱವಂಟಿಗೆಯಲು ಸೀತಳ-ಗಡಿಗೆಯನಿಟ್ಟು ನೀರೆಱೆಯುವ ಬ್ರಾಹ್ಮಣರ ಚಿತ್ರ ನಿಂಬರಗಿ ಶಾಸನದಲ್ಲಿ ಬಂದಿದೆ. ಒಂದೊಂದು ಹಳ್ಳಿಯ 'ಮೇಲಾಳ್ಕೆ' ಯನ್ನು ಆ ಊರಿನ ದೇವಸ್ಥಾನಕ್ಕೆ 'ಸರ್ವನಮಸ್ಯವಾಗಿ' ಬಿಟ್ಟುಕೊಟ್ಟ ವಿವರಗಳೂ ನಮಗೆ ದೊರಕುತ್ತವೆ. ಈ ದತ್ತಿಯನ್ನು ಸ್ಥಾನಿಕಾಚಾರ್ಯರು 'ಒತ್ತಿಯನಿಡಲುಂ ಮಾಱಲುಂ' ದಾನಗೆಯ್ಯಲು ಸಲ್ಲದು. ಮೀಱಿದಂದು ದಂಡ್ಯರು ಒತ್ತೆಯಿಂ ಹಿಡಿದರುಂ ದಂಡ್ಯರು' ಎಂದು

ಹೇಳುವದರಿಂದ (ನಿಂಬರಗಿ ೧೧೩೪) ಜನಜೀವನದಲ್ಲಿ ಕಾನೂನು ಕಟ್ಟಳೆಗಳ ಬಿಗಿ ಇತ್ತೆಂಬುದು ವೇದ್ಯವಾಗುತ್ತದೆ.

ಪ್ರಜಾಜೀವನದ ನೆಮ್ಮದಿಯೊಡನೆ ರಾಜಮಹಾರಾಜರ, ಸಾಮಂತ ಸಚಿವರ ಸಾಂಸ್ಕೃತಿಕ ಜೀವನವೂ ಶಾಸನಗಳಲ್ಲಿ ಚಿತ್ರಿತವಾಗಿದೆ. ತೆಂಗಳಿಯ 'ಮನೆವೆರ್ಗಡೆ' ಮತ್ತು 'ಪ್ರಭು'ವಾಗಿದ್ದ ವೀರಗೊಂಕನ ನಿತ್ಯ ನೈಮಿತ್ತಿಕ ಜೀವನ ಕುರಿತು ಶಾಸನದಲ್ಲಿ ಹೀಗೆ ವರ್ಣಿಸಿದೆ.

ಮದನ ಬ್ಯಾಜದಿನೊರ್ಮೆ ಪೊತ್ತುಗಳೆವಂ
ಮತ್ತೊಮ್ಮೆ ಸಂಗೀತಸ
ಮ್ಮದದಿಂದಿಪ್ಪನದೊಮ್ಮೆ ವಾರ
ವನಿತಾ ಲೀಲಾಕಟಾಕ್ಷೇಕ್ಷಣಾ
ಸ್ಪದ ನಿಪ್ಪಂ ಪರಿಹಾಸ ಗೋಷ್ಠಿಗಳಿ
ನಿಪ್ಪಣಂ ಮತ್ತಮಂತೊರ್ಮೆದೋ
ರ್ಮ್ಮದನುದ್ಯನ್ಮೃಗಯಾವಿನೋದಭರದಿಂ
ಶ್ರೀಗೊಂಕ ಭೂಪಾಳಕಂ ||

ಈ ಜಿಲ್ಲೆಯ ಎಲ್ಲ ಶಾಸನಗಳಲ್ಲಿ ಬರುವ ಪುರವರ್ಣನೆಗಳನ್ನು ನೋಡಿದರೆ ಎತ್ತಿಸಿದ ಅಭವಗೃಹಾವಳಿ; ಬಿತ್ತರದಿಂ ಕಟ್ಟಿಸಿರ್ದ ಕೂಪ ತಟಾಕಂ, ಪುತ್ತೆನ್ನದೀವದಾನಂ (ತೆಂಗಳಿ ಶಾಸನ) ಸಂಪತ್ತು, ಸದ್ಗುಣಗಳಿಂದ ಕೂಡಿ ಪ್ರಜೆಗಳದು ಒಟ್ಟಾರೆ ಸುಖೀಜೀವನವಾಗಿತ್ತೆಂದು ಊಹಿಸಿಕೊಳ್ಳಬಹುದು.

೧೦. ಸಮಾರೋಪ

ಕಲಬುರಗಿ ಜಿಲ್ಲೆ ಕನ್ನಡ ಶಾಸನಗಳಿಗೆ ಈಗಲೂ 'ನೆಲದ ಮರೆಯ ನಿಕ್ಷೇಪವಾಗಿದೆ. ಕೆಲವೊಂದು ಭಾಗದ ಶಾಸನಗಳನ್ನು ಈ ಹಿಂದೆ ಡಾ|| ಫ್ಲೀಟ್, ಡಾ|| ಪಿ. ಬಿ. ದೇಸಾಯಿ, ಡಾ|| ಶಿ. ಚ. ನಂದೀಮಠರಂತಹ ಹಿರಿಯ ವಿದ್ವಾಂಸರು ಅನ್ವೇಷಿಸಿದ್ದಾರೆಂಬುದನ್ನು ಮರೆಯುವಂತಿಲ್ಲ.

ಒಂದು ನಾಡಿನ ಐತಿಹಾಸಿಕ ಸಾಂಸ್ಕೃತಿಕ ಜೀವನಕ್ಕೆ ಶಿಲಾಶಾಸನಗಳು ಅಮೂಲ್ಯ ಸಾಮಗ್ರಿಯನ್ನೊದಗಿಸುತ್ತವೆ. ಇಲ್ಲಿನ ಶಾಸನಗಳ ಕೊಡುಗೆ ಅಪಾರವಾಗಿದೆ. ರಾಷ್ಟ್ರಕೂಟ ರಿಂದ ಅರಂಭಿಸಿ, ಯಾದವರ ಹಾಗೂ ಅವರ ಸಾಮಂ ತಾಧಿಪರ ಆಳಿಕೆಯ ವರೆಗೆ ಈ ನಾಡಿನ ಅಖಂಡ ರಾಜಕೀಯ ಚಲನವಲನಗಳು ಇಲ್ಲಿನ ಶಾಸನಗಳಿಂದ ತಿಳಿದು ಬರುತ್ತವೆ. ರಾಷ್ಟ್ರಕೂಟ ಸಾಮ್ರಾಜ್ಯ ತಲೆಯೆತ್ತಿ ಮೆರೆದುದು ಈ ಜಿಲ್ಲೆ ಯಲ್ಲಿಯೇ ಎಂಬುದು ಅಭಿಮಾನದ ಸಂಗತಿ. ಕೇವಲ ರಾಜ್ಯ ಸಾಮ್ರಾಜ್ಯಗಳನ್ನು ಕಟ್ಟುವದಷ್ಟೇ ಅಲ್ಲದೆ ಪ್ರಜಾ ಜೀವನದಲ್ಲಿ ಶುಸ್ಥಿರ ಶಾಂತಿ ಸುಭಿಕ್ಷಗಳು ನೆಲಸಿ ನಿಲ್ಲುವ ಆಡಳಿತ ಕ್ರಮವನ್ನು ಇವರು ರೂಪಿಸಿಕೊಂಡ ಬಗೆಗೆ ಇಲ್ಲಿನ ಶಾಸನಗಳು ಬೆಳಕು ಚೆಲ್ಲುತ್ತವೆ. ಚಾಳುಕ್ಯ ವಿಕ್ರಮಾದಿತ್ಯನ ಆಳಿಕೆಯನ್ನು ಅಲಂದೆ ಶಾಸನದಲ್ಲಿ 'ಕೃತಯುಗವಾದುದು ಕಲಿಯುಗಂ ಅತಿ ಧಾರ್ಮಿಕವಾಯ್ತು ವಿಕ್ರಮಾದಿತ್ಯ

ನೃಪಂ ಪ್ರತಿಪಾಳಿಪ ರಾಷ್ಟ್ರಂ' ಎಂದು ವರ್ಣಿಸಲಾಗಿದೆ. ನಾಗಾಯಿಯಂತಹ ಪ್ರಸಿದ್ಧ ವಿದ್ಯಾಕೇಂದ್ರ, ಬೌದ್ಧ, ಜೈನ, ವೀರಶೈವ, ವೈಷ್ಣವ ಧರ್ಮಗಳ ಸಮನ್ವಯ ಪೋಷಣೆ, ಸಹಬಾಳ್ವೆಯ ತತ್ತ್ವಗಳು, ಮಿತಾಕ್ಷರೀ ಗ್ರಂಥದಿಂದ ನ್ಯಾಯಲೋಕದಲ್ಲಿ ಸುಪ್ರಸಿದ್ಧನಾದ ವಿಜ್ಞಾನೇಶ್ವರಪಂಡಿತನ ನೆಲೆವೀಡು, ಧಾರ್ಮಿಕ ಪುರುಷರ ಸ್ಥಳಗಳು, ಶಿಲ್ಪ ಸೌಂದರ್ಯದ ತವರುಮನೆಯಾದ ಕಾಳಗೆ, ಮಣೂರು, ಹೊಡಲು, ಶಿರಿವಾಳ, ಏವೂರು, ಕುಳಗೇರಿಗಳಲ್ಲಿನ ದೇವಾಲಯಗಳು, ಚಿನಮಳ್ಳಿ, ಅಲಂದೆ, ಮುದನೂರಿನ ತೀರ್ಥಕ್ಷೇತ್ರಗಳು ಕಲಬುರಗಿ ನಾಡಿನಲ್ಲಿವೆ. ಒಟ್ಟಂದದಲ್ಲಿ ರಾಜಕಿಯ, ಧಾರ್ಮಿಕ, ಸಾಂಸ್ಕೃತಿಕ, ಸಾಹಿತ್ಯಿಕ ಭವ್ಯ ಪರಂಪರೆಯಿಂದ ಕೂಡಿದ ಕರ್ನಾಟಕದ ಚರಿತ್ರೆಗೆ ಕಲಬುರಗಿ ಜಿಲ್ಲೆ ಶತಶತಮಾನಗಳಿಂದಲೂ ತನ್ನ ಕಾಣಿಕೆ ಸಲ್ಲಿಸಿರುವದಕ್ಕೆ ಇಲ್ಲಿನ ಶಿಲಾಶಾಸನಗಳು ಜೀವಂತಸಾಕ್ಷಿ ಯಾಗಿವೆ.

ಉಪನ್ಯಾಸ ಗ್ರಂಥಮಾಲೆಯ ಇತ್ತೀಚಿನ ಪ್ರಕಟನೆಗಳು

ಬೆಲೆ : ಪ್ರತಿ ಒಂದಕ್ಕೆ ೨೫ ಪೈಸೆ

---

೧ ಕಣ್ಣುಗಳ ರಕ್ಷಣೆ ಹಾಗೂ ಅವುಗಳ ಬಗ್ಗೆ ಎಚ್ಚರಿಕೆ
—ಎಚ್. ತಿಮ್ಮಯ್ಯ

೨ ಹುಚ್ಚುನಾಯಿ ರೋಗ ಹಾಗೂ ಪ್ರತಿಬಂಧಕ ಉಪಾಯ
—ಆರ್. ಸಿ. ಅಗಡಿ

೩ ವೀರರಾಣಿ ಬೆಳವಡಿ ಮಲ್ಲಮ್ಮ —ಜಿ. ಜಿ. ಕಾಡದೇವರ

೪ ಜನಪದ ಸಾಹಿತ್ಯದಲ್ಲಿ ನೀತಿ —ಎಂ. ಎನ್. ವಾಲಿ

೫ ಹಿಂದೂ ಸಮಾಜದಲ್ಲಿರುವ ಅನಿಷ್ಟ ಪದ್ಧತಿಗಳ ನಿರ್ಮೂಲನೆ
—ಎಂ. ಬಿ. ಪಾಟೀಲ

೬ ಹಳ್ಳಿಗಳಲ್ಲಿ ಗೃಹ ನಿರ್ಮಾಣ —ಎಂ. ಎಸ್. ಹುಲ್ಲೋಳಿ

೭ ಚಿದಾನಂದಾವದೂತರು —ಆಯ್. ಆಯ್. ಕಳಕಣ್ಣವರ

೮ ಮೂಳೆ ಮುರಿದಾಗ ಮಾಡಬೇಕಾದ ಸುಲಭ ಚಿಕಿತ್ಸೆಗಳು
—ಎ. ಆರ್. ರಾಮಚಂದ್ರ

೯ ಉಪ್ಪು, ಕ್ಷಾರ, ಭೂಮಿ ಮತ್ತು ಅವುಗಳ ಸುಧಾರಣೆ
—ವಿಜಯಕುಮಾರ ಗಿಡ್ನವರ

೧೦ ಪ್ಲ್ಯಾಸ್ಟಿಕ್ ಸರ್ಜರಿ (ಸುರೂಪಕ ಶಸ್ತ್ರವಿಜ್ಞಾನ)
—ವಾಯ್. ಎನ್. ಇರಕಲ್

ಪ್ರಸಾರಾಂಗ ವಿಸ್ತರಣ–ಪ್ರಕಟನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–೫೮೦ ೦೦೩